## ಅಧ್ಯಾಯ–೨
## ಇತಿಹಾಸ

**ಪೌರಾಣಿಕ ಹಿನ್ನೆಲೆ :** ಈ ತಾಲ್ಲೂಕು, ಪುರಾಣ ಕಾಲದಿಂದಲೂ ತನ್ನ ಹಿರಿಮೆಯನ್ನು ಸಾರಿಕೊಂಡು ಬಂದಿದ್ದು, ಪೂರ್ವದಲ್ಲಿ ಅಗಸ್ತ್ಯರು ಈ ಸ್ಥಳವನ್ನು ಸಂದರ್ಶಿಸಿದ್ದರೆಂದು ಹೇಳಲಾಗುತ್ತದೆ. ತಾಲೂಕಿನ 'ಕಣಗಾಲು', ಕಣ್ವ ಋಷಿಗಳ ಆಶ್ರಮವಿದ್ದ ಸ್ಥಳವಾದರೆ, ಸಮೀಪದ ರಾಮನಾಥಪುರದ ಬಳಿ ಕಾವೇರಿ ನದಿಯ ಮಧ್ಯಭಾಗದಲ್ಲಿರುವ ಗಾಯತ್ರಿ ಶಿಲೆಯು ವಿಶ್ವಾಮಿತ್ರ ಋಷಿ ತಪಸ್ಸು ಮಾಡುತ್ತಿದ್ದ ಸ್ಥಳವಾಗಿದ್ದು, ಮೇನಕೆ ಸಮಾಗಮದಿಂದ ಹುಟ್ಟಿದ ಹೆಣ್ಣು ಮಗುವನ್ನು ಕಣ್ವ ಮಹರ್ಷಿಗಳು ತಂದು ಸಾಕಿ ಸಲಹಿದ ಪ್ರದೇಶವೇ 'ಕಣಗಾಲು' ಎಂಬ ಅಭಿಪ್ರಾಯವೂ ಇದೆ.

ಪಾರ್ವತಿ–ಪರಮೇಶ್ವರರು ವಿಹಾರಾರ್ಥವಾಗಿ ಬರುತ್ತಿರುವಾಗ ಪಾರ್ವತಿಗೆ ಈಗಿನ ಬೆಟ್ಟದಪುರದ ಬಳಿ ಬಾಯಾರಿಕೆಯಾಯಿತಂತೆ. ಆಗ ಈಶ್ವರನು ತ್ರಿಶೂಲದಿಂದ ಈಚಲು ಮರದ ಗರಿಗಳ ಬುಡಕ್ಕೆ ಚುಚ್ಚಿ ಅಲ್ಲಿ ಹೊರಹೊಮ್ಮಿದ ಹಾಲನ್ನು ಪಾರ್ವತಿಗೆ ತಣಿಯೇ ಕುಡಿಸಿದನಂತೆ. ಹೀಗೇ ಈಶ್ವರ ಪಾರ್ವತಿಗೆ ನೀರನ್ನು ಕುಡಿಸಿದ ಸ್ಥಳವೇ ಈಚೂರಂತೆ. ತಾಲೂಕಿನ ವಿವಿಧ ಸ್ಥಳಗಳಲ್ಲಿ ಶ್ರೀರಾಮನು ಬಂದಿದ್ದನೆಂದು ಹೇಳುವ ಅನೇಕ ಐತಿಹ್ಯಗಳಿವೆ. ರಾಮ ಬಂದು ಹೋದ ಊರು ರಾವಂದೂರಾಯಿತಂತೆ. ಒಮ್ಮೆ ಲಕ್ಷ್ಮಣನು ನೇರಳೆ ಹಣ್ಣುಗಳನ್ನು ಉದುರಿಸಲೆಂದು ಮರವೇರಿ ಕೊಂಬೆಯೊಂದನ್ನು ಜೋರಾಗಿ ಅಲ್ಲಾಡಿಸಿದಾಗ ಜೇನುಗೂಡಿನಿಂದ ಮೇಲೆದ್ದ ಜೇನುಹುಳುಗಳು. ಹಣ್ಣನ್ನು ಆರಿಸಿಕೊಳ್ಳುತ್ತಿದ್ದ ಅತ್ತಿಗೆಯನ್ನು ಕಚ್ಚಬಹುದೆಂಬ ಆತಂಕದಿಂದ 'ಅತ್ತಿಗೆ ಓಡು' 'ಅತ್ತಿಗೆ ಓಡು' ಎಂದು ಲಕ್ಷ್ಮಣನು ಕೂಗಿದ್ದರಿಂದ ಆ ಸ್ಥಳ 'ಅತ್ತಿಗೋಡು' ಆಯಿತಂತೆ.

ಮಾವುಕಲ್ಲಯ್ಯನ ಬೆಟ್ಟದ ದಶರಥೇಶ್ವರ ದೇವರ ಬಗೆಗೂ ಐತಿಹ್ಯವಿದೆ. ಸೀತಾ–ರಾಮ–ಲಕ್ಷ್ಮಣರು ವನವಾಸದಲ್ಲಿದ್ದಾಗ ದಶರಥನು ತೀರಿಕೊಂಡ ಸುದ್ದಿ ತಿಳಿದು ದುಃಖತಪ್ತರಾದರು. ಅಂತಹ ಸಂದರ್ಭದಲ್ಲಿ ಕೊಡಗಿನ ಭಾಗದ ಕೆಲವು ಹಿರಿಯರು ಬಂದು ಅವರಿಗೆ ಸಮಾಧಾನ ಹೇಳಿ ಸತ್ತ ತಂದೆಗೆ ತಿಥಿ ಮಾಡಲು ಮತಿ ತೋರಿದ ಸ್ಥಳಕ್ಕೆ ತಿತ್ತಿಮತಿಯೆಂದು ಹೆಸರಾಯಿತಂತೆ. ತಿಥಿಗೆ ಬೇಕೆಂದು ಬಿದಿರಕ್ಕಿಯನ್ನು ಸಂಗ್ರಹಿಸಿದ

ಲಕ್ಷ್ಮಣನು ಬಿದಿರಕ್ಕಿಯನ್ನು ಮರೆತು ಬಂದ ಊರು ಮರೆತೂರಾಯಿತಂತೆ. ತಿಥಿ ಮಾಡಿದ ಶ್ರೀರಾಮನು ತಂದೆಯ ಹೆಸರಿನಲ್ಲಿ ದಶರಥೇಶ್ವರ ಲಿಂಗವನ್ನು ಈ ಬೆಟ್ಟದ ಮೇಲೆ ಪ್ರತಿಷ್ಠಾಪಿಸಿ ಗುಡಿಕಟ್ಟಿಸಿದನಂತೆ. ಪೂಜಾ ಸಮಯದಲ್ಲಿ ದಶರಥೇಶ್ವರನು ಲಿಂಗದ ಒಳಗಿಂದ ಮಾತನ್ನಾಡುತ್ತಿದ್ದನಂತೆ. ಹೀಗಿರುವಾಗ ಒಂದು ದಿನ ಸೀತೆ ತಾನು ಕಂಡ ಆಶ್ಚರ್ಯಕರವಾದ ಚಿನ್ನದ ಜಿಂಕೆಯನ್ನು ತರಲು ರಾಮನನ್ನು ಕಳುಹಿಸಿದಳು. ರಾಮನಿಗೆ ಸಹಾಯಾರ್ಥವಾಗಿ ಲಕ್ಷ್ಮಣ ಅವನ ಹಿಂದೆ ಹೋದನು. ಆ ಸಂದರ್ಭದಲ್ಲಿ ರಾವಣನು ತಪಸ್ವಿಯ ವೇಷದಲ್ಲಿ ಬಂದು ಭಿಕ್ಷೆ ಕೊಡುವಂತೆ ಸೀತೆಯನ್ನು ಪೀಡಿಸಿದನು. ದಶರಥೇಶ್ವರ ಲಿಂಗವು 'ಹೋಗಬೇಡ, ಹೋಗಬೇಡ' ಎಂಬ ತಿಳುವಳಿಕೆಯ ಮಾತು ಹೇಳುತ್ತಿದ್ದರೂ ತಪಸ್ವಿಯ ಆಗ್ರಹಕ್ಕೆ ತುತ್ತಾಗಬಾರದೆಂದು ಭಿಕ್ಷೆ ನೀಡಲು ಹೋದ ಸೀತೆ,ರಾವಣನ ಕೈಗೆ ಸಿಕ್ಕಿಬಿದ್ದಳು. ಆ ಕೂಡಲೆ ಅವಳು ಭಯಗೊಂಡು ಮಾವನನ್ನು ಸಹಾಯಕ್ಕೆ ಕರೆದಳು. ಆದರೆ ತನ್ನ ಮಾತನ್ನು ಧಿಕ್ಕರಿಸಿ ಹೋದ ಅವಳಿಗೆ ಮಾವನಿಂದ ಮಾರುತ್ತರ ಬರಲೇ ಇಲ್ಲ. ಹೀಗೇ ಸೀತಾಪಹರಣವಾದ ಸ್ಥಳವೇ ಇದೆಂದು ಹೇಳುತ್ತಾರೆ. ಈಗಲೂ ಇಲ್ಲಿ ಸೀತೆಯಮಡು, ಸೀತೆಯಸೆರಗು ಎಂಬ ಸ್ಥಳಗಳಿವೆ. ಮಾವ ಮಾತಾಡದೆ ಕಲ್ಲಾದ ಕಾರಣ ದಶರಥೇಶ್ವರನಿಗೆ ಮಾವುಕಲ್ಲಯ್ಯ ಎಂದು ಹೆಸರಾಯಿತಂತೆ. ಕುಂತಿಯು ಈ ನೆಲದ ಮಗಳಾದ್ದರಿಂದ ಅವರೆಗಿಡ ಹೂಕಚ್ಚಿ ಚೊಟ್ಟಾಗಿ ಫಲಬಿಡುವ ದೀಪಾವಳಿಯ ಕಾರ್ತಿಕ ಮಾಸವಿಡೀ ಇಲ್ಲಿ ಕುಂತಿಪೂಜೆ ಮಾಡುವ ಪದ್ಧತಿ ರೂಢಿಯಲ್ಲಿದೆ.

ಪರಮಶಿವಭಕ್ತನಾದ ಚೋಳರಾಜನು ಸತ್ಯಧರ್ಮ ನ್ಯಾಯನೀತಿಗಳಿಂದ ರಾಜ್ಯವಾಳುತ್ತಿದ್ದಾಗ ಅವನ ಆಸ್ಥಾನಕ್ಕೆ ಬಂದ ಬ್ರಾಹ್ಮಣ ಯತಿಯ ಬಳಿ ಅವಲೋಹಗಳನ್ನು ಚಿನ್ನವಾಗಿ ಮಾರ್ಪಡಿಸುವ ಸಿದ್ಧಿರಸವಿತ್ತು. ಅವನು ಅದನ್ನು ಕಾಶಿಗೆ ಹೋಗಿ ಬರುವವರೆಗೆ ರಕ್ಷಿಸಿಡಲು ಚೋಳರಾಜನಿಗೆ ಕೊಟ್ಟನು. ಚೋಳರಾಜನು ಆ ಸಿದ್ಧಿರಸವನ್ನು ತನ್ನದಾಗಿ ಮಾಡಿಕೊಳ್ಳಬೇಕೆಂದು ದುರಾಶೆಪಟ್ಟು, ಸಿದ್ಧಿರಸದ ಪಾತ್ರೆಯನ್ನು ಕೇಳಲು ಬಂದ ಬ್ರಾಹ್ಮಣಯತಿಯ ತಲೆಯನ್ನು ಕಡಿಸಿದನು. ಆಗ ಆ ಬ್ರಾಹ್ಮಣನು ಪಿಶಾಚಿಯಾಗಿ ಚೋಳನ ಹೆಗಲಿಗಂಟಿಕೊಂಡು, ಕೊಡುತ್ತಿದ್ದ ಬಾಧೆಯನ್ನು ತಾಳಲಾರದೆ ಚೋಳರಾಜನು ವಿಲಿವಿಲಿ ಒದ್ದಾಡಿದನು. ಅದರಿಂದ ತಪ್ಪಿಸಿಕೊಳ್ಳಲು ಉಪಾಯವನ್ನು ಕೇಳಿದಾಗ ಲಕ್ಷ ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ, ಶಿವಾಲಯಗಳನ್ನು ಕಟ್ಟಿಸಿದ್ದರೆ, ಪಿಶಾಚಿಯ ಕಾಟದಿಂದ ಮುಕ್ತನಾಗಬಹುದೆಂಬ ಸಲಹೆಯಂತೆ ಚೋಳರಾಜನು ಹೋದ ಹೋದಲ್ಲೆಲ್ಲಾ ಗುಡಿಕಟ್ಟಿಸಿ ಲಿಂಗ ಪ್ರತಿಷ್ಠಾಪನೆ ಮಾಡುತ್ತಿದ್ದ. ರಾಜನು ದೇವಾಲಯದೊಳಕ್ಕೆ ಹೋಗುವಾಗ ಪಿಶಾಚಿಯು ಅವನ ಬೆನ್ನನ್ನು ಬಿಟ್ಟು ಹೊರಗೆ ಕುಳಿತು ಕಾಯುತ್ತಿತ್ತು. ಅವನು ಪೂಜೆಯನ್ನು ಮುಗಿಸಿ ಹೊರಕ್ಕೆ ಬಂದೊಡನೆ ಮತ್ತೆ ಹೆಗಲೇರುತ್ತಿತ್ತು. ಆದರೆ ತನ್ನ ಭಕ್ತ ಶಿರೋಮಣಿಯ ಕಷ್ಟವನ್ನು ನೋಡಲಾರದ ಶಿವನು ಕನಸಿನಲ್ಲಿ ಕಾಣಿಸಿಕೊಂಡು, ಗುಡಿಯ ಪ್ರವೇಶಕ್ಕೆ ಒಂದು ದ್ವಾರ, ನಿರ್ಗಮನಕ್ಕೆ ಒಂದು ಪ್ರತ್ಯೇಕ ದ್ವಾರ ಕಟ್ಟಿಸಲು ಹೇಳಿದನು. ಅದರಂತೆ ದೇವಾಲಯವನ್ನು ಕಟ್ಟಿಸಿದ ರಾಜನು ಪೂರ್ವಾಭಿಮುಖವಾಗಿರುವ ದ್ವಾರದಿಂದ ಪ್ರವೇಶಿಸಿ, ದಕ್ಷಿಣಾಭಿಮುಖವಾಗಿರುವ ದ್ವಾರದಿಂದ ನಿರ್ಗಮಿಸಿದನಂತೆ.

ಇತ್ತ ರಾಜ ಬರುವನೆಂದು ಕಾದು ಕಾದು ಬೆಸ್ತಾದ ಪಿಶಾಚಿ ಅವನನ್ನು ಹುಡುಕಿಕೊಂಡು ಹೋಯಿತಂತೆ. ಹೀಗೇ ಚೋಳರಾಜನ ಕಷ್ಟಕ್ಕೆ ವೈದ್ಯನಾದ ಈಶ್ವರನೇ ಪಿರಿಯಾಪಟ್ಟಣದ ಕೋಟೆಯಲ್ಲಿರುವ ವೈದ್ಯೇಶ್ವರ. ವೈದ್ಯೇಶ್ವರನ ಕೃಪೆಗೆ ಪಾತ್ರನಾದ ಕರಿಕಾಲಚೋಳನು ಕಟ್ಟಿಸಿದ ಕೆರೆಯೇ ಈಗಿನ 'ದೊಡ್ಡಕೆರೆ' ಎಂದು ಹೇಳುತ್ತಾರೆ.

ಉತ್ತರ ದೇಶದಿಂದ ದಕ್ಷಿಣದ ಕಡೆಗೆ ಬಂದ ಮಲೆಯ ಮಾದೇಶ್ವರ ಈ ತಾಲೂಕಿನ ತಮ್ಮಡಿಹಳ್ಳಿ, ಅತ್ತಿಗೋಡು, ಪಿರಿಯಾಪಟ್ಟಣ ಮುಂತಾದ ಕಡೆಗಳಲ್ಲಿ ಕೆಲಕಾಲ ತಂಗಿದ್ದಂತೆ ತಿಳಿದು ಬರುತ್ತದೆ. ಪಿರಿಯಾಪಟ್ಟಣದ ಈರೇಗೌಡನು ಮಾದೇಶ್ವರನ ಹೆಸರಿನಲ್ಲಿ ಬಿಟ್ಟಿದ್ದ ಬಸವನನ್ನು ಯಾರೋ ಕೊಂದು ನೂರೊಂದು ಪಾಲು ಮಾಡಿ ಕೈಕಾಲು ತೊಳೆದುಕೊಂಡು ಬರಲು ಹಳ್ಳದ ಕಡೆಗೆ ಹೊರಟರಂತೆ. ಈ ವಿಷಯ ಮಾದೇಶ್ವರನಿಗೆ ಅರಿವಾಗಿ ಕೋಪದಿಂದ ದಿಟ್ಟಿಸಿದಾಗ ಬಸವನನ್ನು ಕೊಂದವನು ತಲೆಕೆಳಗಾಗಿ ಕಲ್ಲಾಗಿ ಹೋದ. ಬಸವನ ನೂರೊಂದು ಪಾಲು ಮಾಂಸದ ಚೂರುಗಳು ನೂರೊಂದು ಲಿಂಗಗಳಾದವು. ಹೀಗೆ ಮಾದೇಶ್ವರನು ಪಿರಿಯಾಪಟ್ಟಣದಲ್ಲಿ ನೂರೊಂದಯ್ಯ ಎಂಬ ಹೆಸರನ್ನು ಪಡೆದು ಈಗಲೂ ಕಾರ್ತಿಕ ಮಾಸದಲ್ಲಿ ಜಾತ್ರೆ ಉತ್ಸವಗಳಲ್ಲಿ ಪೂಜೆಗೊಳ್ಳುತ್ತಿದ್ದಾನೆ.

**ಪ್ರಾಗೈತಿಹಾಸ :** ಮೈಸೂರಿನ ಪಶ್ಚಿಮಕ್ಕೆ ಸುಮಾರು ತೊಂಬತ್ತು ಕಿ. ಮೀ. ದೂರದಲ್ಲಿರುವ ಕೊಪ್ಪದಲ್ಲಿ (ಪಿರಿಯಾಪಟ್ಟಣ ತಾಲ್ಲೂಕು) ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಇಲಾಖೆಯು ಡಾ. ಕೆ.ಕೆ. ಸುಬ್ಬಯ್ಯ ಅವರ ನೇತೃತ್ವದಲ್ಲಿ ಬೃಹತ್‌ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಉತ್ಖನನ ಮಾಡಿದೆ. ಇಲ್ಲಿ ನವಶಿಲಾಯುಗದಿಂದ ಇತಿಹಾಸ ಪೂರ್ವಕಾಲದವರೆಗಿನ ಹಲವಾರು ನೆಲೆಗಳನ್ನು ಪತ್ತೆ ಮಾಡಲಾಗಿದೆ. ಕಬ್ಬಿಣದ ವಿವಿಧ ಆಯುಧೋಪಕರಣಗಳನ್ನು ಬಳಸುತ್ತಿದ್ದ ಒಂದು ಜನಪದ ಸಂಸ್ಕೃತಿಯನ್ನು ಬೆಳಕಿಗೆ ತರಲಾಗಿದೆ. ಶಿಲಾ ಶವಸಂಪುಟಗಳು, ಮೂರು ಕಾಲಿನ ಕೆಂಪುಬಣ್ಣದ ಜಾಡಿಗಳು, ಕಬ್ಬಿಣದ ಚಿಕ್ಕಚೂರಿ, ಖಡ್ಗ, ಬಾಣದಮೊನೆ, ಕೊಡಲಿ, ಮೊಳೆ, ಚಿಮಟಿಗೆ ಮುಂತಾದವು ಸಿಕ್ಕಿವೆ. ಇಲ್ಲಿ ಪತ್ತೆಯಾಗಿರುವ ಅವಶೇಷಗಳಲ್ಲಿ ನವಶಿಲಾಯುಗದ ಕೊಡಲಿ, ಪುಟ್ಟಪುಟ್ಟ ಅಗೇಟ್–ಸ್ಪಿಯಟೈಟ್–ಕಾರ್ನಿಲಿಯನ್ ಮಣಿಗಳು ಹಾಗೂ ಮಾನವ ಅಸ್ಥಿಪಂಜರದ ಭಾಗಗಳು ಗಮನಾರ್ಹವಾದವು. ಹೀಗೆ ಒಂದು ವಿಶಿಷ್ಟ ಸಂಸ್ಕೃತಿಯ ಜನವಾಸ್ತವ್ಯವಿದ್ದ ಸಾಂಸ್ಕೃತಿಕ ಅವಶೇಷಗಳು, ಕಲ್ಗೋರಿಗಳ ಜತೆಗೆ ಇರುವ ಸಾಧ್ಯತೆ ಹೆಚ್ಚಾಗಿದೆ. ಇಲ್ಲಿ ಇನ್ನೂ ವ್ಯಾಪಕವಾದ ಉತ್ಖನನಕಾರ್ಯ ಜರುಗಬೇಕಾಗಿದೆ.

ಪಿರಿಯಾಪಟ್ಟಣ ಪ್ರದೇಶದ ಬೆಟ್ಟಗುಡ್ಡಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಲ್ಲುಚಪ್ಪಡಿಗಳೂ, ಗುಂಡುಕಲ್ಲುಗಳು ಸುಲಭವಾಗಿ ದೊರೆಯುವಂಥ ಸನ್ನಿವೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಬೃಹತ್ ಶಿಲಾಗೋರಿಯ ನೆಲೆಗಳಿರುವುದು ಸಹಜ. ಜನಪದರು ವಾಸಿಸಿದ್ದಿರಬಹುದಾದ ಸಾಧ್ಯತೆಯೂ ಅಷ್ಟೇ ಸ್ವಾಭಾವಿಕ. ಕೊಪ್ಪ, ಹೆಗ್ಗಡೆಹಳ್ಳಿ

ಮುಂತಾದೆಡೆಗಳಲ್ಲಿ ಗಮನಿಸಿದಂತೆ ಸಾಧ್ಯವಾದಷ್ಟೂ ಸಮತಟ್ಟಾದ ತಪ್ಪಲು ಪ್ರದೇಶ, ಹೆಚ್ಚು ಶಿಲಾಮಯವಾದ ಬರಡು ಭೂಮಿಗಳನ್ನು ಕಲ್ಗೋರಿಗಳ ನಿರ್ಮಾಣಕ್ಕೆ ಮೀಸಲಾಗಿಟ್ಟಿದ್ದುಂಟು.

ಬೃಹತ್ ಶಿಲಾಯುಗೀನ ಜನರ ವಿಶಿಷ್ಟ ಹಾಗೂ ವ್ಯಾಪಕವಾದ ಉದ್ಯಮವೆಂದರೆ ಕಬ್ಬಿಣದ ಅದಿರನ್ನು ಪರಿಷ್ಕರಿಸಿ, ಕಮ್ಮಾರಿಕೆಯಿಂದ ವಿವಿಧ ಸಲಕರಣೆ, ಆಯುಧೋಪಕರಣಗಳನ್ನು ತಯಾರಿಸುತ್ತಿದ್ದುದು ; ಕಬ್ಬಿಣತಂತ್ರಜ್ಞಾನ ಹಾಗೂ ಬಳಕೆಯ ಉದ್ಯಮ ಈ ಪ್ರದೇಶದ ಅಂದಿನ ಜನರ ಜೀವನಶೈಲಿಯಲ್ಲಿ ಮಹತ್ವದ ಮೈಲುಗಲ್ಲು. ಅದೊಂದು “ಕಬ್ಬಿಣಯುಗ ಸಂಸ್ಕೃತಿ” ಆಗಿತ್ತು. ಬಹುಬಗೆಯ ಮಡಕೆ ಕುಡಿಕೆಗಳನ್ನು ಬಳಸುತ್ತಿದ್ದ ಕಲಾವಂತ ಜೀವನವಿಧಾನ ಅದಾಗಿತ್ತು. ಕಪ್ಪು ಕೆಂಪುಬಣ್ಣದ ಮಡಕೆ, ವಿವಿಧ ಆಕಾರದ ಬಟ್ಟಲು, ತಪ್ಪಲೆ, ಕೊಡ, ಉಂಗುರಾಕಾರದ ಅಡ್ಡಣಿಗೆ, ಬಾನಿ – ಆ ಕಾಲದ ಜೀವನಶೈಲಿಯನ್ನು ಪ್ರತಿಬಿಂಬಿಸುವಂಥವು. ಶಿಲಾವರ್ತುಲ, ಶಿಲಾತೊಟ್ಟಿಗಳಲ್ಲಿ ಅವಳಿಜವಳಿ ತೊಟ್ಟಿಗಳೂ ಈ ದಿಶೆಯಲ್ಲಿ ಗಮನಾರ್ಹ.

ಪಿರಿಯಾಪಟ್ಟಣ ಪ್ರದೇಶದ ಉತ್ಖನನಗಳು ಹೊರಗೆಡವಿದಂತೆ, ಬೃಹತ್ ಶಿಲಾಗೋರಿ ಸಂಸ್ಕೃತಿಯ ಜನಪದರು ಹಲವು ಅಲಂಕಾರಸಾಧನಗಳನ್ನು ಬಳಸುತ್ತಿದ್ದು. ಪೋಣಿಸಿದ ಸುಂದರ ಮಣಿಸರಗಳನ್ನು ಇಲ್ಲಿ ಹೆಸರಿಸಬಹುದು. ಕ್ರಿ.ಪೂ. ೬೦೦ರಿಂದ ಕ್ರಿ.ಶ. ೧ನೆಯ ಶತಮಾನದಲ್ಲಿದ್ದ ಈ ಬೃಹತ್ ಶಿಲಾಯುಗ ಸಂಸ್ಕೃತಿಯು ನಂತರದ ಸಂಸ್ಕೃತಿಗೆ ಬುನಾದಿಯಾದ ಬಗೆಯನ್ನು ತಿಳಿದುಕೊಳ್ಳಬೇಕಾಗಿದೆ. ಈ ಸಂಸ್ಕೃತಿಯ ಪ್ರಸರಣ ಪ್ರಕ್ರಿಯೆಯನ್ನೂ ವಿಶ್ಲೇಷಿಸಬೇಕಾಗಿದೆ.

ತಾಲ್ಲೂಕಿನ ಬೆಣಗಾಲು ಎಂಬ ಕುಗ್ರಾಮವು ಕಾವೇರಿಯ ಬಲದಂಡೆಯ ಮೇಲೆ ಪಿರಿಯಾಪಟ್ಟಣಕ್ಕೆ ಒಂಭತ್ತು ಮೈಲಿ ದೂರದಲ್ಲಿದೆ. ಸುಮಾರು ೧೫೦ಕ್ಕೂ ಹೆಚ್ಚು ಕಲ್ಗೋರಿಗಳು ಇಲ್ಲಿ ಗೋಚರಿಸಿವೆ. ಅದನ್ನು ಸ್ಥಳೀಕರು ಪಾಂಡವರ ಮನೆ ಎಂದು ಕರೆಯುತ್ತಾರೆ. ಇವು ಮೂರು ಸಾವಿರ ವರ್ಷಗಳಷ್ಟು ಹಿಂದಿನ ಬೃಹತ್ ಶಿಲಾ ಸಂಸ್ಕೃತಿಯ ಮುಖ್ಯ ನೆಲೆಗಳೆಂದು ಎ.ವಿ. ನರಸಿಂಹಮೂರ್ತಿ ಅಭಿಪ್ರಾಯಪಡುತ್ತಾರೆ.

ವೃತ್ತಾಕಾರದ ಉಂಡೆಕಲ್ಲುಗಳ ಜೋಡಣೆ, ೨೦ ಅಡಿ ಅಗಲ, ಆಳ ೫ ಅಡಿ ಮತ್ತೆ ಕೆಲವು ೧೧ ಅಡಿ ವ್ಯಾಸ, ೬ ಅಡಿ ಆಳವನ್ನು ಹೊಂದಿರುವ ಹಾಗೂ ಕ್ಯಾಪ್‌ಸ್ಟೋನ್ (ಮೇಲೆ ಮುಚ್ಚುವ ಕಲ್ಲಿನ ಹಲಗೆ ಇರುವ ಕಲ್ಲಿನ ಶವಪೆಟ್ಟಿಗೆ) ಇರುವ ಈ ಕಲ್ಗೋರಿ ಸಮಾಧಿ ಸಂಸ್ಕೃತಿಯ ಜನರು ದಕ್ಷಿಣಭಾರತಕ್ಕೆ ಮೊಟ್ಟ ಮೊದಲು ಕಬ್ಬಿಣದ ಬಳಕೆಯನ್ನು ಪರಿಚಯಿಸಿದರು. ಈ ಶವಪೆಟ್ಟಿಗೆಯಲ್ಲಿ ಮೃತರ ಮೂಳೆ ಹಾಗೂ ಅವರು ಬಳಸುತ್ತಿದ್ದ ಆಹಾರ ಮತ್ತು ನೀರು ತುಂಬಿದ ಮಡಕೆ, ಕುಡಿಕೆ, ಮಣೆ, ಕಬ್ಬಿಣದ ಆಯುಧ, ರಾಗಿಹೊಟ್ಟು ಇತ್ಯಾದಿ ಕಂಡು ಬಂದಿವೆ. ಆದ್ದರಿಂದ ಪ್ರಾಗೈತಿಹಾಸಿಕ ಕಾಲದಲ್ಲಿನ ಜನರು ಶವಸಂಸ್ಕಾರ ಮಾಡುತ್ತಿದ್ದ ಪದ್ಧತಿ

ತಿಳಿದುಬರುತ್ತದೆ. ಎರಡು ಶವಪೆಟ್ಟಿಗೆಯನ್ನು ಬಿಚ್ಚಿರುವುದು ಗಮನಾರ್ಹ. ವಿಶೇಷತೆಯೆಂದರೆ ಸ್ಥಳೀಕರು ಇವುಗಳನ್ನು ನೀರು ಸಂಗ್ರಹ ತೊಟ್ಟಿಯಾಗಿ ಬಳಸಿದ್ದಾರೆ. ಅದು ಆಯತಾಕಾರವಾಗಿದ್ದು ಪೋರ್ಟ್‌ಹೋಲ್ (ಸಮಾಧಿಯೊಳಗೆ ಆಹಾರ ಪದಾರ್ಥಗಳನ್ನು ಇಡಲು ಮಾಡಿರುವ ಸಣ್ಣ ಕಿಂಡಿ) ನಾಲ್ಕು ಕಡೆಯೂ ಗ್ರಾನೈಟ್ ಶಿಲೆಯ ಹಲಗೆ ಜೋಡಿಸಿದ್ದು, ಮೂರು ಅಡಿ ಅಗಲವಿದ್ದು ತಳಭಾಗದಲ್ಲಿ ಹಾಸುಗಲ್ಲು ಇದ್ದು ಮೇಲ್ಭಾಗ ಮುಚ್ಚಲು ಒಂದು ಕಲ್ಲಿನ ಹಲಗೆ, ಹೀಗೆ ಎಲ್ಲವೂ ಸೇರಿ ಒಂದು ಪೆಟ್ಟಿಗೆ ಆಗಿದೆ. ಅದನ್ನೇ ಬೃಹತ್ ಶಿಲಾ ಶವಪೆಟ್ಟಿಗೆ ಎಂದು ಕರೆಯುತ್ತಾರೆ. ಆದರೆ ಸ್ಥಳೀಕರಿಗೆ ಇದರ ಅರಿವಿದ್ದಂತೆ ತೋರುವುದಿಲ್ಲ.

ಪಿರಿಯಾಪಟ್ಟಣ ತಾಲ್ಲೂಕಿನ ಆಲನಹಳ್ಳಿ ಮತ್ತು ನವಿಲೂರು ಗ್ರಾಮಗಳ ನಡುವೆ ಗ್ರಾಮದೇವತೆಗಳ ಪೂಜೆಪುರಸ್ಕಾರಗಳು ನಡೆಯುತ್ತಾ ಬಂದಿವೆ. ವಿಚಿತ್ರವೆಂದರೆ ಈ ಗುಡಿಗಳಲ್ಲಿ ಪೂಜಿಸುವ ವಸ್ತು ಕಪ್ಪುಕಲ್ಲಿನಲ್ಲಿ ಮಾಡಿದ ನವಶಿಲಾಯುಗ ಸಂಸ್ಕೃತಿಯ ಆಯುಧಗಳೇ ಆಗಿವೆ. ಇಲ್ಲಿ ನುಣುಪಾದ ಕೊಡಲಿಗಳು ದೇವತೆಗಳ ರೂಪ ತಾಳಿ ದೊಡ್ಡಮ್ಮ ಮತ್ತು ಚಿಕ್ಕಮ್ಮ ದೇವತೆಗಳಾಗಿ ಉಳಿದಿವೆ. ಇದಲ್ಲದೆ ಬೈಲುಕುಪ್ಪೆಯ ಹತ್ತಿರ ಹಂದಿಗುಡ್ಡಕಾವಲೂ ಸಹ ಗಿರಿಜನರು ವಾಸಿಸುವ ಒಂದು ಸಣ್ಣ ಗ್ರಾಮ. ಅಲ್ಲಿಯೂ ಸಹ ಆಯುಧಗಳನ್ನು ಪೂಜಿಸುವ ಪರಿಪಾಠವಿದ್ದು, ಸಾಂಸ್ಕೃತಿಕ ಅವಶೇಷಗಳು ಹೇಗೋ ರಕ್ಷಿಸಲ್ಪಡುತ್ತಿವೆ ಎಂಬುದು ಸಮಧಾನಕರವಾಗಿದೆ. ೧೯೮೧–೮೨ರಲ್ಲಿ ಡಾ. ಕೆ.ಕೆ. ಸುಬ್ಬಯ್ಯ ಅವರ ನಿರ್ದೇಶನದಲ್ಲಿ ಕಾವೇರಿಯ ಬಲದಂಡೆಯಲ್ಲಿರುವ ಕೊಪ್ಪ ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಬೃಹತ್ ಶಿಲಾಸಮಾಧಿಯ ಉತ್ಖನನ ನಡೆಯಿತು. ಅಲ್ಲಿಯೂ ಸಹ ಮಡಕೆ, ಕುಡಿಕೆ, ಕಬ್ಬಿಣದ ಆಯುಧ. ಕತ್ತಿ, ಭರ್ಜಿ, ಮಣಿಗಳು, ರಾಗಿಹೊಟ್ಟು ಮುಂತಾದವು ದೊರೆತಿವೆ.

**ಇತಿಹಾಸಕಾಲ**

ಪಿರಿಯಾಪಟ್ಟಣದ ಇತಿಹಾಸ ಕೇವಲ ತಾಲೂಕಿಗೆ ಸೀಮಿತವಾಗಿರದೇ ನೆರೆಯ ಕೊಡಗು ಜಿಲ್ಲೆ ಹಾಗೂ ಜಿಲ್ಲೆಯ ಕೃಷ್ಣರಾಜನಗರ, ಹೆಗ್ಗಡದೇವಕೋಟೆ ಮತ್ತು ಹುಣಸೂರು ಮಂಡ್ಯ ಜಿಲ್ಲೆಯ ಅರಕಲಗೂಡು, ಕೆ.ಆರ್. ಪೇಟೆ, ತಾಲ್ಲೂಕುಗಳಿಗೂ ಸೇರಿದ ವಿಶಾಲಪ್ರದೇಶಕ್ಕೆ ಹರಡಿತ್ತು. ಪಿರಿಯಾಪಟ್ಟಣ ತಾಲ್ಲೂಕಿನ ೬೦ ಗ್ರಾಮಗಳಲ್ಲಿ ಒಟ್ಟು ೧೪೮ ಶಾಸನಗಳು ಪ್ರಕಟವಾಗಿವೆ. ಎನ್. ಹವಳಯ್ಯನವರು ಎರಡು ವೀರಗಲ್ಲು ಶಾಸನಗಳನ್ನೂ ಹಾಗೂ ಪಿ.ಕೆ. ರಾಜಶೇಖರ ಅವರು ಕಂಪಲಾಪುರದ ಸಮೀಪದ ಸತ್ಯಾಗಾಲದಲ್ಲಿ ಒಂದು ಶಾಸನವನ್ನೂ ಗಮನಿಸಿದ್ದಾರೆ. ಪರಿಶೋಧನೆ ಮತ್ತು ಕ್ಷೇತ್ರಕಾರ್ಯಗಳು ಸಂಯೋಜಿತ ರೀತಿಯಲ್ಲಿ ನಡೆದರೆ ಇನ್ನಷ್ಟು ಹೊಸಶಾಸನಗಳು ಬೆಳಕಿಗೆ ಬರುವ ಸಂಭವ ಉಂಟು. ಈ ಪ್ರದೇಶವನ್ನು ಆಳಿದ ಕದಂಬ, ಗಂಗ, ಕಲ್ಯಾಣದ ಚಾಲುಕ್ಯ, ಹೊಯ್ಸಳ, ಚಂಗಾಳ್ವ, ವಿಜಯನಗರ, ಮೈಸೂರು ಒಡೆಯರಿಗೆ ಸಂಬಂಧಿಸಿದ ಶಾಸನಗಳಿವೆ. ಸ್ವಾಭಾವಿಕವಾಗಿಯೇ, ಈ ಪ್ರದೇಶವನ್ನಾಳಿದ ಚಂಗಾಳ್ವರ ಶಾಸನಗಳು

ಅಧಿಕವಾಗಿವೆ. ಪಿರಿಯಾಪಟ್ಟಣ ಎಂಬ ಸ್ಥಳನಾಮವೇ ಚಂಗಾಳ್ವ ದೊರೆಯ ಹೆಸರನ್ನು ಆಧರಿಸಿದ್ದು, ಈ ಶಾಸನಗಳನ್ನು ವಂಶವಾರು ವಿಂಗಡಿಸಿ ತಿಳಿದುಕೊಳ್ಳಬಹುದು.

**ಬನವಾಸಿ ಕದಂಬರು :** ಕನ್ನಡ ನಾಡನ್ನು ಆಳಿದ ಪ್ರಮುಖ ಆದಿರಾಜವಂಶಗಳಲ್ಲಿ ಕದಂಬ ಮನೆತನಕ್ಕೆ ಸೇರಿದ ಹಿಟ್ನಹೆಬ್ಬಾಗಿಲು ಶಾಸನ ಸಂಸ್ಕೃತ ಭಾಷೆಯಲ್ಲಿರುವ ನಾಲ್ಕು ತಾಮ್ರಫಲಕಗಳಿಂದ ಕೂಡಿದ ತಾಮ್ರಶಾಸನ ಕದಂಬರ ರಾಜಲಾಂಛನವಾದ ಸಿಂಹಮುದ್ರೆ ಸಹಿತವಾಗಿದೆ. ಇದೊಂದು ದಾನಶಾಸನವಾಗಿದ್ದು ದಾನಿಯ ಹೆಸರನ್ನು ಶ್ರೀವಿಜಯಶಿವಮೃಗೇಶವರ್ಮ ಎಂದು ಹೇಳಿದೆ. ಈತ ಮೃಗೇಶವರ್ಮನೆಂದು ಸುಪರಿಚಿತವಾದ ಕದಂಬ ದೊರೆ. ಈ ಶಾಸನವನ್ನು ದೊರೆಯ ಆಳ್ವಿಕೆಯ ಏಳನೆಯ ವರ್ಷದಲ್ಲಿ ಹೊರಡಿಸಲಾಗಿದ್ದು, ಅದು ಕ್ರಿ.ಶ. ೪೬೨–೬೩ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ವೇದವೇದಾಂಗ ವಿದ್ಯಾಪಾರಂಗತರಾದ ಪಿಂಗಲಸ್ವಾಮಿಯ ಮಗ ಸರ್ವಸ್ವಾಮಿಗೆ ಸಹಿರಣ್ಯೋದಕವಾಗಿ ರಾಜ ಮೃಗೇಶವರ್ಮನು ಕಿಱುನೀರಿಲ್ಲಿ ಗ್ರಾಮವನ್ನು ದಾನಮಾಡಿದನು. ಈ ಗ್ರಾಮವನ್ನು "ಅಭಟಪ್ರವೇಶ" ಎಂದು ಘೋಷಿಸಿ ಅನ್ತಷ್ಕರಮ್ ಮತ್ತು ಪಂಗೋತ್ಕೋಟಮ್ ಎಂಬ ತೆರಿಗೆಗಳಿಂದ ಮುಕ್ತಮಾಡಿದ. (ಅಭಟ ಪ್ರವೇಶವೆಂದರೆ ಯಾವಕಾರಣಕ್ಕೂ ಸೈನಿಕರು ಈ ಗ್ರಾಮವನ್ನು ಪ್ರವೇಶ ಮಾಡದಿರುವುದು). ಗಂಗವಾಡಿಯ ಗಡಿಯಲ್ಲಿದ್ದ ಪಿರಿಯಾಪಟ್ಟಣ ಪ್ರದೇಶ ಎಷ್ಟು ಕಾಲದವರೆಗೆ ಬನವಾಸಿ ಕದಂಬರ ವಶದಲ್ಲಿತ್ತು ಎಂಬುದು ತಿಳಿದುಬರುವುದಿಲ್ಲ. "ದಾನ ಕೊಟ್ಟ ಕಿರುನಿರಿಲ್ಲಿ ಗ್ರಾಮವನ್ನು ಗುರುತಿಸಲು ಸಾಧ್ಯವಾಗಿಲ್ಲ" ಎಂದು ಎಪಿಗ್ರಾಫಿಯ ಕರ್ನಾಟಕದ ನಾಲ್ಕನೆಯ ಸಂಪುಟದ ಪೀಠಿಕೆಯಲ್ಲಿ ಹೇಳಿದೆ. ವಾಸ್ತವವಾಗಿ ಈ ತಾಲ್ಲೂಕಿನಲ್ಲಿರುವ ಇಂದಿನ ಕಿರುನೆಲ್ಲಿಯೇ ಈ ಕಿರುನೀರಿಲ್ಲಿ ಗ್ರಾಮ ಎಂಬುದನ್ನು ಗಮನಿಸಬಹುದು.

**ತಲಕಾಡಿನ ಗಂಗರು:** ಅಲ್ಪಾವಧಿಯ ರಾಜಕೀಯಗ್ರಹಣ ಕಾಲವನ್ನು ಬಿಟ್ಟರೆ ಇಡೀ ಪಿರಿಯಾಪಟ್ಟಣ ಭಾಗ ಗಂಗವಾಡಿಯಲ್ಲೇ ಲೀನವಾಗಿತ್ತು. ಆದರೆ ಈ ಭಾಗದಲ್ಲಿ ದೊರೆಯುವ ಗಂಗರ ದಾಖಲೆಗಳು ನಿರಾಶಾದಾಯಕ. ಸತ್ಯವಾಕ್ಯ ಪೆರ್ಮಾನಡಿ (೪ನೆಯ ರಾಚಮಲ್ಲ)ಯ ಕ್ರಿ. ಶ. ೯೬೭–೬೮ರ ಹಿರೇಮಳಲಿ ಶಾಸನ ಕುಪ್ಪೆ ನಾಡೊಳಗಿನ ಮಣಲೂರನ್ನು ಒಂದು ಅಗ್ರಹಾರವನ್ನಾಗಿ ಮಾಡಿ ಮೈದುನ ಗೊಮ್ಮಯ್ಯ ಎಂಬಾತ ದಾನಕೊಟ್ಟಿದ್ದನ್ನು ತಿಳಿಸುತ್ತದೆ. ಕೂರಗಲ್ಲಿನ ವೀರಗಲ್ಲು ಶಾಸನ ಗಂಗಪೆರ್ಮಾನಡಿಯ ಕಾಲದಲ್ಲಿ ಎಱೆಯಪ್ಪನು ಕೊಂಗಲ್‌ನಾಡು–೮೦೦೦ ವನ್ನೂ ಮತ್ತು ಬೂತುಗನರಾಣಿ ಪರಮಬ್ಬೆಯು ಕೂರ್ಗಲ್ಲನ್ನು ಆಳುತ್ತಿದ್ದಾಗ ನಡೆದ ತುರುಗಾಳಗದಲ್ಲಿ ಮಡಿದ ಕೂರ್ಗಲ್ಲ ಗಾವುಂಡನ ಸ್ಮರಣಾರ್ಥ ಮೂರು ಖಂಡುಗ ಭೂಮಿಯನ್ನು ಎಱೆಯಪ್ಪರಸನು ದಾನ ಕೊಟ್ಟ ವಿಚಾರವನ್ನು ತಿಳಿಸುತ್ತದೆ.

ಜನಪದ ವೀರಕಾವ್ಯ ಪಿರಿಯಾಪಟ್ಟಣ ಕಾಳಗದಲ್ಲಿ ಪಿರಿಯಾಪಟ್ಟಣ ರಾಜ್ಯವನ್ನು ಮತ್ತೆ ಮತ್ತೆ 'ಗಂಡುಭೂಮಿ' ಎಂದು ಸಾರಿ ಸಾರಿ ಹೇಳಲಾಗಿದೆ. ಗಂಡುಭೂಮಿಯ ಸಂಸ್ಕೃತ ರೂಪವೇ ಪುಂರಾಷ್ಟ್ರ ಎನ್ನುವುದಾದರೆ ಈ 'ಗಂಡುಭೂಮಿ' ಮೈಸೂರಿನಿಂದ

ಪಡುವಣ ಭಾಗದ ನಾಡು ಎಂಬ ಅರ್ಥ ಬರುವಂತೆ ಹೇಳಿಕೊಂಡು ಬರಲಾಗಿದೆ. ಈ ಪುಂರಾಷ್ಟ್ರ ಅರ್ಥಾತ್ ಪುನ್ನಾಟವು ಕಾವೇರಿಯು ಹರಿದು ಬರುವ ಕೊಡಗಿನ ಕುಶಾಲನಗರದಿಂದ ಹಿಡಿದು ರಾಮನಾಥಪುರ, ಎಡತೊರೆ ಸೇರಿದಂತೆ ಇತ್ತ ಕಡೆಗೆ ಕಪಿನೀ ಹರಿದು ಬರುವ ಹೆಗ್ಗಡದೇವನಕೋಟೆ, ನಂಜನಗೂಡು, ತಿ.ನರಸೀಪುರಗಳವರೆಗೂ ಆವರಿಸಿರುವ ಹುಣಸೂರು, ಪಿರಿಯಾಪಟ್ಟಣಗಳನ್ನೊಳಗೊಂಡ ವಿಸ್ತಾರವಾದ ನಾಡೆಂದು ಕಾಣುತ್ತದೆ. ಇದಕ್ಕೆ ಪೂರಕವಾಗಿ ಪ್ರೊ. ದೇಜಗೌ ಅವರು ಪಿರಿಯಾಪಟ್ಟಣದ ಸುತ್ತಮುತ್ತಲ ಪ್ರದೇಶಕ್ಕೆ ಹಿಂದೆ 'ಪುನ್ನಾಟ' ಎಂಬ ಹೆಸರಿತ್ತು ಎಂದು ಹೇಳಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪೂನಾಡಹಳ್ಳಿಯೇ ಪುನ್ನಾಟದ ಅವಶೇಷ ರೂಪವಾಗಿರಬಹುದೆಂದು ಹೇಳುತ್ತಾರೆ.

**ಚಂಗಾಳ್ವರ ಇತಿಹಾಸ :** ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಚಂಗಾಳ್ವ ರಾಜವಂಶ ಸುಮಾರು ೧೦ ರಿಂದ ೧೭ನೇ ಶತಮಾನದವರೆಗೂ ರಾಜ್ಯಭಾರಮಾಡಿದೆ. ಹೊಯ್ಸಳರು ಇವರನ್ನು ಮಲೆಪರೆಂದು ಕರೆದಿರುವುದರಿಂದ ಇವರು ಬೆಟ್ಟಗುಡ್ಡ ಪ್ರದೇಶವನ್ನು ಆಳುತ್ತಿದ್ದವರೆಂದು ಸ್ಪಷ್ಟವಾಗುತ್ತದೆ. ಚಂಗಾಳ್ವರ ಶಾಸನಗಳು ಎಡತೊರೆ (ಕೆ.ಆರ್. ನಗರ) ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ಲಕ್ಷ್ಮಣತೀರ್ಥದ ಪಶ್ಚಿಮ ಭಾಗಗಳಲ್ಲಿ ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕುಗಳಲ್ಲಿ ದೊರೆತಿವೆ. ಅಲ್ಲದೆ ಅವರ ಪ್ರಸ್ತಾಪವಿರುವ ಶಾಸನಗಳು ಹಳೇ ಮೈಸೂರು ಭಾಗದಲ್ಲೆಲ್ಲ ಹರಡಿಕೊಂಡಿವೆ. ಅವರ ಮೂಲನೆಲೆ ಹುಣಸೂರು ಮತ್ತು ಅದರ ಸುತ್ತಮುತ್ತಲ ಪ್ರದೇಶವಾಗಿತ್ತು. ಇದೇ ಚಂಗನಾಡು. ಡೆರೆಟ್ ಅವರು ತಿಳಿಸುವಂತೆ ಚಂಗಾಳ್ವರ ರಾಜ್ಯದ ಎಲ್ಲೆಕಟ್ಟು ಉತ್ತರ-ದಕ್ಷಿಣಕ್ಕೆ ಹೇಮಾವತಿಯಿಂದ ಕಾವೇರಿಯವರೆಗೆ, ಪೂರ್ವ ಪಶ್ಚಿಮಕ್ಕೆ ಕಾವೇರಿಯಿಂದ ಕೊಡಗಿನವರೆಗೆ. ಪಿರಿಯಾಪಟ್ಟಣ ತಾಲ್ಲೂಕಿನ ಶಾಸನಗಳಲ್ಲಿ ಸಂಖ್ಯೆಯ ದೃಷ್ಟಿಯಿಂದ ಸುಮಾರು ಶೇಕಡ ೨೫ ರಷ್ಟು ಶಾಸನಗಳು ಚಂಗಾಳ್ವರದೇ ಆಗಿವೆ.

ಚಂಗಾಳ್ವರು ತಾವು ಚಂದ್ರವಂಶದವರೆಂದೂ ಯಾದವಕುಲಕ್ಕೆ ಸೇರಿದವರೆಂದೂ ದ್ವಾರಾವತಿಯಿಂದ ಬಂದವರೆಂದೂ ಮೈಸೂರು ಅರಸರಂತೆಯೇ ಹೇಳಿಕೊಂಡಿದ್ದಾರೆ. ಆದರೆ ಅವರು ಬಹುಶಃ ಕದಂಬರ ಅಥವಾ ಚಾಲುಕ್ಯರ ಅಧೀನರಾಗಿದ್ದ ಆಳುಪರ ಒಂದು ಶಾಖೆಯವರಾಗಿದ್ದಿರಬಹುದು. ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹೋಬಳಿಯ ಅಲ್ಪನಾಯಕನಹಳ್ಳಿ. ಆಳುಪ ರಾಜನೊಬ್ಬನ ಹೆಸರಿನಲ್ಲಿ ಸ್ಥಾಪಿತವಾದ ಊರಾಗಿರಬಹುದು. ಆಳುಪ ಎಂಬುದು ಆಳವ, ಆಳ್ವ ಆಗುವ ಸಾಧ್ಯತೆ ಇದೆ. ಈ ಆಳ್ವ ಎಂಬ ಪದ ಚಂಗಾಳ್ವರಿಗೂ ಕೊಂಗಾಳ್ವರಿಗೂ ಸೇರಿರುವುದರಿಂದ ಚಂಗಾಳ್ವರೂ ಕೊಂಗಾಳ್ವರೂ ಒಂದೇ ಮೂಲದವರೆಂದು ಹೇಳಬಹುದಾಗಿದೆ. ಆದರೆ ಇವರೀರ್ವರ ಶಾಸನಗಳಲ್ಲೂ ಆಳುಪರ ವಿಷಯ ಎಲ್ಲೂ ಕಂಡುಬರುವುದಿಲ್ಲ.

**ಚಂಗಾಳ್ವ - ಚೋಳ ಸಂಬಂಧ:** ೧೧ನೆಯ ಶತಮಾನದ ಪ್ರಾರಂಭದಿಂದ ದಿಢೀರನೆ 'ಚಂಗಾಳ್ವ' ಎಂಬ ರಾಜವಂಶ ಇಲ್ಲಿ ಪ್ರಕಟವಾಗಿದೆ. ೧೦ನೆಯ ಶತಮಾನದ ಕೊನೆಯಲ್ಲಿ

ಚೋಳರ ಧಾಳಿಗೆ ಸಿಲುಕಿದ ಗಂಗವಂಶ ತನ್ನ ಅಸ್ತಿತ್ವ ಕಳೆದುಕೊಂಡಿತು. ಗಂಗವಾಡಿ ಸಂಪೂರ್ಣವಾಗಿ ಚೋಳರ ವಶವಾಯಿತು. ಆಗ ವಿಸ್ತಾರವಾದ ಗಂಗವಾಡಿಯ ವ್ಯವಸ್ಥಿತ ಆಡಳಿತಕ್ಕಾಗಿ ಚೋಳರು ಹಲವಾರು ರಾಜಕೀಯ ಬದಲಾವಣೆಗಳನ್ನು ಮಾಡಿರಬಹುದು. ಅದರ ಒಂದು ಗುರುತು – ಚಂಗಾಳ್ವರದು. ಇವರು ಪ್ರಪ್ರಥಮವಾಗಿ ನಮಗೆ ಕಾಣಿಸಿಕೊಳ್ಳುವುದೇ ಚೋಳರ ಸಾಮಂತರಾಗಿ. ಇವರ ಚೋಳನಿಷ್ಠೆ ಅಚಲವಾದುದು. ಇವರ ಹೆಸರಿನಲ್ಲಿ 'ಚಂಗಾಳ್ವ' ಎನ್ನುವುದನ್ನು ಬಿಟ್ಟರೆ ಉಳಿದೆಲ್ಲವೂ ಚೋಳಹೆಸರೇ!

ಕ್ರಿ. ಶ. ೯೯೦ ರಲ್ಲಿ ಚಂಗಾಳ್ವ ವಂಶಜರು ಆಳ್ವಿಕೆ ಪ್ರಾರಂಭಿಸಿರಬೇಕೆಂಬುದು ಕೇವಲ ಊಹೆ. ಕಾರಣ ಅಲ್ಲಿಂದ ಸುಮಾರು ಒಂದು ಶತಮಾನ ಕಾಲ ಅವರ ಯಾವ ಶಾಸನವೂ ದೊರೆತಿಲ್ಲ. ವೀರ ರಾಜೇಂದ್ರ ಚೋಳನ (ಕ್ರಿ. ಶ. ೧೦೬೪–೧೦೭೦) ಕಾಲಕ್ಕೆ ಚಂಗಾಳ್ವರ ಪ್ರಥಮಶಾಸನ ದೊರೆಯುತ್ತದೆ. ರಾಜೇಂದ್ರ ಚೋಳ(ವೀರರಾಜೇಂದ್ರ)ನನ್ನಿಚಂಗಾಳ್ವ ಪ್ರಕಟಗೊಂಡಿರುವ ಪ್ರಥಮದೊರೆ. ಅವನ ನಂತರ ಮಾಚೆಯರಸ ಚಂಗಾಳ್ವ (ಕ್ರಿ. ಶ. ೧೯೯೦) ಚಂಗಾಳ್ವದೇವ (ಕ್ರಿ. ಶ. ೧೯೯೧) ಮತ್ತು ಕುಲೋತ್ತುಂಗ ಚೋಳವೊಡೆಯಾದಿತ್ಯ (ಉದಯಾದಿತ್ಯ ಕ್ರಿ. ಶ. ೧೯೯೭) ಆಳಿದಂತೆ ಕಂಡು ಬರುತ್ತದೆ. ಇವರು ನೇರವಾಗಿ ಚೋಳರ ಆಳ್ವಿಕೆಗೆ ಒಳಪಟ್ಟ ಸಾಮಂತ ಅರಸರು.

ಪ್ರಾರಂಭಕ್ಕೆ ಚೋಳರ ಸಾಮಂತರಾಗಿದ್ದ ಚಂಗಾಳ್ವರು ೧೨ನೆಯ ಶತಮಾನದ ಪೂರ್ವಾರ್ಧದಲ್ಲಿ ಹೊಯ್ಸಳರ ಸಾಮಂತರಾದರು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೊಯ್ಸಳರೊಂದಿಗೆ ಇವರು ನಡೆಸಿದ ಹೋರಾಟ ಫಲ ನೀಡಲಿಲ್ಲ. ಈ ಕಾಲದಲ್ಲಿದ್ದ ಚಂಗಾಳ್ವ ರಾಜರೆಂದರೆ – ಚಂಗಾಳ್ವ (ಕ್ರಿ. ಶ. ೧೧೨೪), ಮಹಾದೇವ ಕುಲೋತ್ತುಂಗ ಚೋಳ ಚಂಗಾಳ್ವ (ಕ್ರಿ. ಶ. ೧೧೭೨) ಮತ್ತು ಪೆಮ್ಮ ವೀರರಸ (ಕ್ರಿ. ಶ. ೧೧೭೪) ಅನಂತರ ಸೋಮದೇವರಸ ಮತ್ತು ಬಪ್ಪದೇವರಸ (ಕ್ರಿ. ಶ. ೧೨೫೨ (?)). ಪೂರ್ವ ಘಟ್ಟ ಕಾಲದ ಚಂಗಾಳ್ವ ವಂಶಾವಳಿಯ ಸಮರ್ಪಕ ಪರಿಷ್ಕರಣೆ ಮತ್ತು ಕಾಲನಿರ್ಣಯ ಇನ್ನೂ ಆಗಬೇಕಾಗಿದೆ. ಅದೇ ರೀತಿಯಲ್ಲಿ ಕ್ರಿ. ಶ. ೧೯೯೭ರ ಸಂಗರಸೆಟ್ಟಿಹಳ್ಳಿಯ ಶಾಸನವೊಂದು ಕುಲೋತ್ತುಂಗಚೋಳ ಉದಯಾದಿತ್ಯ ಚಂಗಾಳ್ವನು ಗಣಪತಿ ದೇವಾಲಯವೊಂದನ್ನು ಚಂಗಾಳ್ವ ಸೆಟ್ಟಿಹಳ್ಳಿಯಲ್ಲಿ ನಿರ್ಮಿಸಿದ ವಿಚಾರ ತಿಳಿಸುತ್ತದೆ. ರಾಜನನ್ನು ಶಾಸನದಲ್ಲಿ "ಮಹಾಮಂಡಲೇಶ್ವರ" ಎಂದು ಸಂಬೋಧಿಸಲಾಗಿದೆ. ಸಂಗರ ಸೆಟ್ಟಿಹಳ್ಳಿಯೇ ಶಾಸನೋಕ್ತ ಚಂಗಾಳ್ವ ಸೆಟ್ಟಿಹಳ್ಳಿ ಆಗಿದೆ.

**ಚಂಗಾಳ್ವ – ಹೊಯ್ಸಳ ಸಂಬಂಧ :** ಹೊಯ್ಸಳ ರಾಜ ವಿಷ್ಣುವರ್ಧನನು ಚಂಗಾಳ್ವರನ್ನು ಸೋಲಿಸಿ ತನ್ನ ವಶಮಾಡಿಕೊಂಡಿದ್ದನು. ಈ ಕಾರ್ಯ ಪ್ರಾಯಶಃ ಚಂಗಾಳ್ವರು ತಲಕಾಡನ್ನು ಸಂಪೂರ್ಣ ಒಪ್ಪಿಕೊಂಡಂತೆ ಭಾಸವಾಗುವುದಿಲ್ಲ. ಕ್ರಿ. ಶ. ೧೧೨೪ರಲ್ಲಿ ಈರ್ವರ ನಡುವೆ ಯುದ್ಧವಾದಂತೆ ಕಂಡು ಬರುತ್ತದೆ. ಮುಂದೆ ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಮತ್ತೊಮ್ಮೆ ಈರ್ವರೂ ಕಾದಾಡಿ ಸೋಲನ್ನು ಹಂಚಿಕೊಂಡಿರುವ ವಿಚಾರ

ಶಾಸನಗಳಿಂದ ತಿಳಿದುಬರುತ್ತದೆ. ಕಂಪಲಾಪುರದ ಕ್ರಿ. ಶ. ೧೧೭೪ ರ ಶಾಸನವೊಂದು ವೀರಬಲ್ಲಾಳನ ಮಹಾಪ್ರಧಾನ ಬೆಟ್ಟರಸ ದಣ್ಣಾಯಕನು ಪಾಲ್ಪರೆಯ ಮೇಲೆ ಧಾಳಿಮಾಡಿ ಚಂಗಾಳ್ವ ಮಹಾದೇವನನ್ನು ಸೋಲಿಸಿ ಯುದ್ಧದಲ್ಲಿ ಅವನನ್ನು ಕೊಂದ ವಿಚಾರ ತಿಳಿಸುತ್ತದೆ ಈ ಕಾರಣದಿಂದ ಮಹಾಮಂಡಲೇಶ್ವರ ಪೆಮ್ಮವೀರರಸ ಚಂಗಾಳ್ವನು ತನ್ನ ಸಹಚರರೊಡಗೂಡಿ ಪಾಲ್ಪರೆಯ ಮೇಲೆ ಪ್ರತಿಧಾಳಿ ಮಾಡಿ (ಅಲ್ಲಿ ಬೀಡುಬಿಟ್ಟಿದ್ದ) ಹೊಯ್ಸಳ ದಣ್ಣಾಯಕ ಬೆಟ್ಟರಸನನ್ನು ಸೋಲಿಸಿ ಪ್ರಾಯಶಃ ಆತ ಅಲ್ಲಿಂದ ಓಡಿ ಹೋಗುವಂತೆ ಮಾಡಿದ.

ಚಂಗಾಳ್ವ–ಹೊಯ್ಸಳ ಹಗೆತನ ವ್ಯಕ್ತಿಗತವಾಗಿದ್ದಂತೆ ಕಂಡುಬರುತ್ತದೆ. ಕಾರಣ ರಾಮನಾಥಪುರದ ಕ್ರಿ. ಶ. ೧೨೫೨ ರ ಒಂದು ಶಾಸನದಲ್ಲಿ ಚಂಗಾಳ್ವ ಅರಸನು ಹೊಯ್ಸಳ ಸೋಮೇಶ್ವರನ ಸಾಮಂತನಾಗಿ ಪ್ರಕಟಗೊಂಡಿದ್ದಾನೆ. ಕ್ರಿ. ಶ. ೧೨೫೨ರ ರಾಮನಾಥಪುರದ ಶಾಸನಾನಂತರ ಚಂಗಾಳ್ವರು ಕಣ್ಮರೆಯಾಗುತ್ತಾರೆ. ಸುಮಾರು ಎರಡು ಶತಮಾನಗಳವರೆಗೆ ಇವರ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಇದೊಂದು ಸೋಜಿಗದ ಸಂಗತಿ. ಹೊಯ್ಸಳರ ಮತ್ತು ಅನಂತರದ ಯಾವ ಶಾಸನದಲ್ಲೂ ಚಂಗಾಳ್ವರನ್ನು ನಿರ್ನಾಮ ಮಾಡಿದ ಮಾಹಿತಿ ಇಲ್ಲ. ಅವರನ್ನು ಸೆರೆಯಲ್ಲಿಟ್ಟಿದ್ದಾಗಲೀ ಅಥವಾ ಬೇರೆಡೆಗೆ ಸಾಗಿಸಿದ್ದಾಗಲೀ ಬಹಿರಂಗಗೊಂಡಿಲ್ಲ. ಸದಾಕಾಲ ತಮ್ಮತನವನ್ನು ಕಾಯ್ದುಕೊಳ್ಳಲು ಹೆಣಗಾಡುತ್ತಿದ್ದು ಸಾಕಷ್ಟು ತೋಳ್ಬಲವನ್ನು ಹೊಂದಿದ್ದ ಚಂಗಾಳ್ವರಿಗಾದ ಈ ಗ್ರಹಣ ಗಂಭೀರವಾಗಿ ಆಲೋಚಿಸುವಂತಹುದು. ಚಂಗಾಳ್ವರ ಎರಡನೆಯ ಘಟ್ಟದ ಆಳ್ವಿಕೆಯು ೧೫ನೆಯ ಶತಮಾನದಲ್ಲಿ ಪ್ರಾರಂಭವಾಗಿ ೧೭ನೆಯ ಶತಮಾನದವರೆಗೆ ಮುಂದುವರೆದಿದೆ.

**ಚಾಲುಕ್ಯ:** ಕಲ್ಯಾಣದ ಚಾಲುಕ್ಯರಿಗೆ ಸಂಬಂಧಿಸಿದಂತೆ ಇರುವ ಏಕಮಾತ್ರ ವೀರಗಲ್ಲು ಶಾಸನವು ಕುಡಕೂರಿನಲ್ಲಿದೆ. ಇದರ ಕಾಲ ಕ್ರಿ. ಶ. ೯೯೭–೯೮ ಚಾಲುಕ್ಯ ಪೆರ್ಮಾನಡಿದೇವನ ಮಗಳಾದ ಪಂಪಾದೇವಿಯು 'ರಾಜ್ಯಾಭ್ಯುದಯ'ದ ಉಲ್ಲೇಖವಿದರಲ್ಲಿದೆ.

**ಹೊಯ್ಸಳ :** ತಾಲೂಕಿನಲ್ಲಿ ಹೊಯ್ಸಳರ ಎರಡು ಶಾಸನಗಳಿದ್ದು, ಮೊದಲನೆಯದು ಕಂಪಲಾಪುರದ ಕರಕಂಠೇಶ್ವರ ದೇವಾಲಯದ ಪ್ರಾಕಾರದ ವೀರಗುಡಿಯೊಳಗಿದೆ. ಎರಡು ಕಲ್ಲುಗಳ ಮೇಲೆ ಕಂಡರಿಸಲಾಗಿರುವ ಈ ಶಾಸನದ ಕಾಲ ಕ್ರಿ. ಶ. ೧೧೭೪. ಆಗ ಎರಡನೆಯ ಬಲ್ಲಾಳನು ದೋರಸಮುದ್ರದಿಂದ ಆಳುತ್ತಿದ್ದ. ಅರಸನ ಅನೇಕ ಬಿರುದುಗಳನ್ನು ಈ ಶಾಸನ ಉಲ್ಲೇಖಿಸುತ್ತದೆ.

ಎರಡನೆಯ ಬಲ್ಲಾಳನ ಶಾಸನದ ತರುವಾಯ, ಸುಮಾರು ೧೫೦ ವರ್ಷಗಳನಂತರ, ಮೂರನೆಯ ಬಲ್ಲಾಳನ ಕ್ರಿ. ಶ. ೧೩೩೮ರ ಶಾಸನವೊಂದು (ಸಂಖ್ಯೆ–೧೯) ಹಳಗನಹಳ್ಳಿಯಲ್ಲಿ ಕಂಡುಬರುತ್ತದೆ. ಹೊಯ್ಸಳರ ಆಳ್ವಿಕೆಯ ಅಂತ್ಯವಾಗಲೇ ಆರಂಭಗೊಂಡಿತ್ತು ; ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆಯಾಗಿತ್ತು. ಮಹಾಪ್ರಧಾನ

ಸಿಂಗೆಯ ದಣ್ಣಾಯಕನು ಹಳಗನಹಳ್ಳಿಯ ಹೊಲಗದ್ದೆಗಳನ್ನು ದಾನವಿತ್ತ ವಿಷಯವನ್ನು ಈ ಶಾಸನವು ನಿರೂಪಿಸುತ್ತದೆ.

**ಚಂಗಾಳ್ವ – ವಿಜಯನಗರದ ಸಂಬಂಧ :** ವಿಜಯನಗರದ ಎರಡನೆಯ ಹರಿಹರನ ಆಳ್ವಿಕೆಗೆ ಸೇರಿದ ಕ್ರಿ. ಶ. ೧೩೯೮ರ ಮಲ್ಲಿನಾಥಪುರ ಶಾಸನವು ಅರಸನ ಆದೇಶದ ಮೇರೆಗೆ ಲಖಂಣವೊಡೆಯನು ಕುಡುಕೂರ ಮಲ್ಲಿಕಾರ್ಜುನ ದೇವರ ಸೇವೆಗಳಿಗಾಗಿ ಸಿಂಗಪಟ್ಟಣದ ಉಪಗ್ರಾಮವಾದ ಆಪಗೊಂಡನಹಳ್ಳಿಯನ್ನು ದಾನ ನೀಡಿದ್ದು, ಶಾಸನದಲ್ಲಿ ಹೇಳಿರುವ ಸಿಂಗಪಟ್ಟಣವೇ ಈಗಿನ ಪಿರಿಯಾಪಟ್ಟಣ. ಕೂರಗಲ್ಲಿನ ಶಾಸನದಲ್ಲಿ ಚಂಗನಾಡಿನ ಉಲ್ಲೇಖವಿದೆ.

ಕ್ರಿ. ಶ. ೧೫೦೩–೦೪ಕ್ಕೆ ಸೇರುವ ಹಿರೇಮಳಲಿ ಶಾಸನವೊಂದು ಚಂಗಾಳ್ವ ಮಹಾದೇವನನ್ನು ಹೆಸರಿಸಿ ಅವನ ವಂಶಾವಳಿಯನ್ನು ಕೊಟ್ಟಿದೆ. ಇದರ ಪ್ರಕಾರ ಚಂಗಾಳ್ವ ಮೊದಲ ಅರಸು. ಅವನ ನಂತರ ಕ್ರಮವಾಗಿ ನಾಗ, ರಂಗ, ಪಿರ್ಯ್ಯಣ ಮತ್ತು ಇವನ ಮಕ್ಕಳಾದ ನಂಜ ಮತ್ತು ಮಹಾದೇವ ಹೆಸರಿಸಲ್ಪಟ್ಟಿದ್ದಾರೆ. ಮೊದಲ ದೊರೆ ಚಂಗಾಳ್ವ ಪ್ರಾಯಶಃ ೧೪ನೆಯ ಶತಮಾನದಲ್ಲಿ ಆಳಿದ್ದಿರಬೇಕು. ಈತನನ್ನು ದ್ವಾರಾವತಿಯಿಂದ ಬಂದ ಚಂದ್ರವಂಶದ ಅರಸು ಎಂದು ಹೆಸರಿಸಲಾಗಿದೆ. ಚಂಗಾಳ್ವರು ಆ ವೇಳೆಗೆ ವಿಜಯನಗರದ ಚಕ್ರವರ್ತಿಗಳ ಸಾಮಂತರಾಗಿ ಕಾರ್ಯನಿರ್ವಹಿಸುವುದು ಅನಿವಾರ್ಯವಾಗಿತ್ತು. ಹಿರೇಮಳಲಿ ಶಾಸನವು ಬೆಟ್ಟದಪುರದ ಶ್ರೀ ಅನ್ನದಾನಿ ಮಲ್ಲಿಕಾರ್ಜುನ ದೇವರಿಗೆ ಚಂಗಾಳ್ವ ಮಹಾದೇವನು ಆ ಗ್ರಾಮವನ್ನೇ ದಾನವಾಗಿ ಕೊಟ್ಟ ವಿಚಾರ ತಿಳಿಸುತ್ತದೆ. ಪಿರಿಯಾಪಟ್ಟಣದ ಕ್ರಿ. ಶ. ೧೫೦೬ರ ವೀರಗಲ್ಲುಶಾಸನದಿಂದ ವೀರನರಸಿಂಹನ ಕಾಲದ ಹೋರಾಟವೊಂದರಲ್ಲಿ ಬಯಿಚಂಗನು ಮರಣ ಹೊಂದಿದ ಘಟನೆ ಹಾಗೂ ಗಂಗಪ್ಪನಾಯಕನ ಉಲ್ಲೇಖವಿದೆ. ಅವರು ಸ್ವತಂತ್ರರಾಗಿದ್ದಾಗ ೧೫೦೯ರಲ್ಲಿ ಕೃಷ್ಣದೇವರಾಯನು ಪಟ್ಟಕ್ಕೆ ಬಂದನು. ಆತನು ಆಡಳಿತ ವಹಿಸಿಕೊಂಡ ಕೂಡಲೇ ಉಮ್ಮತ್ತೂರಿನ ಮೇಲೆ ದಂಡೆತ್ತಿ ಬಂದಾಗ ಹೊಯ್ಸಳನಾಡಿಗೂ ಬಂದಿದ್ದನೆಂದು ಚರಿತ್ರೆಯಲ್ಲಿ ವರ್ಣಿತವಾಗಿದೆ. ಬಹುಶಃ ಆ ಸಂದರ್ಭದಲ್ಲಿ ಸ್ವತಂತ್ರನಾಗಿಯೇ ಇರಲು ಪ್ರಯತ್ನಿಸಿದ ಚಂಗಾಳ್ವ ನಂಜರಾಜನಿಗೂ ಕೃಷ್ಣದೇವರಾಯನ ಸೈನ್ಯಕ್ಕೂ ಯುದ್ಧ ನಡೆದಿರಬಹುದು. ವಿಜಯನಗರದ ಅರಸರ ಅಧೀನಕ್ಕೆ ಚಂಗಾಳ್ವರು ಒಳಗಾದ ಕಾರಣದಿಂದಾಗಿ ಚಂಗಾಳ್ವ ಭೂಮಿಯಲ್ಲೆಲ್ಲ ಅವರು ಹಾಕಿಸಿದ ಶಾಸನಗಳು, ಅವರು ಕಟ್ಟಿಸಿದ ದೇವಾಲಯಗಳು, ಅವರ ಹೆಸರಿನ ಊರುಗಳು ಎಲ್ಲೆಂದರಲ್ಲಿ ಕಾಣಸಿಗುತ್ತವೆ. ಕ್ರಿ. ಶ. ೧೫೨೧ರ ಅಲ್ಪನಾಯಕನಹಳ್ಳಿ ಶಾಸನ ಮಲ್ಲಿಕಾರ್ಜುನ ದೇವರಿಗೆ ನಂಜಯದೇವನು (ಚಂಗಾಳ್ವ) ಆ ಹಳ್ಳಿಯನ್ನೇ ದಾನಮಾಡಿದ ವಿಚಾರ ತಿಳಿಸುತ್ತದೆ.

ಅಚ್ಯುತರಾಯನ ಕಾಲದ ಒಂದು ಶಾಸನವು ಬೆಟ್ಟದಪುರದಲ್ಲಿದೆಯಾದರೂ ಬಹಳಷ್ಟು ಸವೆದು ಹೋಗಿದ್ದು, ಮುದ್ದಗವುಂಡನು ತನ್ನ ತಂದೆಯ ಪುಣ್ಯಾರ್ಥ ದಾನನೀಡಿದಂತೆ ತೋರುತ್ತದೆ. ಕ್ರಿ. ಶ. ೧೫೬೮ರ ಸನ್ಯಾಸಿಪುರ ತಾಮ್ರಶಾಸನ ಚಂಗಾಳ್ವರ

ಮುಂದುವರೆದ ವಂಶಾವಳಿಯನ್ನು ಕೊಡುತ್ತದೆ. ಅದು ಈ ರೀತಿ ಇದೆ. ಪಿರ್ಯಣ್ಣ, ಅವನ ಮಗ ನಂಜ; ನಂಜನ ಮಗ ನಂಜುಂಡ. ಅವನ ಮಗ ಶ್ರೀಕಂಠ. ಆತನ ಮಗ ವೀರ (ವೀರರಾಜಯ) ಶಾಸನದಲ್ಲಿ ಹೇಳಿರುವಂತೆ ವೀರರಾಜಯನು ಸನ್ಯಾಸಿಪುರ ಗ್ರಾಮವನ್ನು ಋಕ್‌ಶಾಖೆ, ಭಾರದ್ವಾಜಗೋತ್ರದ, ಆಶ್ವಲಾಯನ ಸೂತ್ರದ ಅಷ್ಟಾವಧಾನಿ ಸೋಮನಾಥ ದೀಕ್ಷಿತರ ಮಗ ನಾರಸಿಂಹ ಭಟ್ಟರಿಗೆ ದಾನವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ.

ಪಿರಿಯಾಪಟ್ಟಣದ ಚೆನ್ನಿಗರಾಯ ದೇವಸ್ಥಾನದ ಬಾಗಿಲುವಾಡದಲ್ಲಿರುವ ಕ್ರಿ. ಶ. ೧೫೯೦ರ ಶಾಸನ ಶ್ರೀಕಂಠರಾಜ್ಜೈಯನ ಮಗನಾದ "ಶ್ರೀ ಮನ್ಮಹಾಮಂಡಳಿಕ ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ಶ್ರೀ ಪಿರಿಯಾರಾಜಯದೇವ"ನು ಪ್ರಾಚೀನ ರಾಜಧಾನಿಯನ್ನು ಜೀರ್ಣೋದ್ಧಾರ ಮಾಡಿ ಅದಕ್ಕೆ "ಪಿರಿಯರಾಜಪಟ್ಟಣ" ಎಂದು ಪುನರ್‌ನಾಮಕರಣ ಮಾಡಿ ಅದೇ ಹೆಸರಿನಿಂದಲೇ ಕರೆಯಬೇಕೆಂದು ಆಜ್ಞೆ ಮಾಡಿದ. ಅದರ ಪೂರ್ವದ ಹೆಸರು "ಸಿಂಗ ಪಟ್ಟಣ" ಆ ಹೆಸರಿನಿಂದ ನಗರವನ್ನು ಯಾರೂ ಕರೆಯಬಾರದೆಂದೂ ಕಟ್ಟಳೆಮಾಡಿದ. ಇಲ್ಲಿಯೂ ಆಳರಸನು "ಕುಲೋತ್ತುಂಗ ಚಂಗಾಳ್ವ" ಎಂದು ಸಂಬೋಧಿತನಾಗಿದ್ದಾನೆ. ಇದರಿಂದಾಗಿ ನೂತನ ನಗರ ಪಿರಿಯರಾಜಪಟ್ಟಣವು ಭವ್ಯವೂ, ಭದ್ರವೂ ಆದ ಕೋಟೆಕೊತ್ತಲಗಳನ್ನು ಹೊಂದಿ ಅಭೇದ್ಯ ರಾಜಧಾನಿಯಾಯಿತು. ಅದೇ ಊರಿನ ಇನ್ನೊಂದು ಶಾಸನವು ವಿಜಯನಗರದ ತಿರುಮಲರಾಜಯ್ಯದೇವ ಮಹಾಅರಸು ಚಂಗಾಳ್ವಪ್ರಭು ರುದ್ರಗಣನಿಗೆ ನೀಡಿದುದು. ದೊರೆಯು ತನ್ನ ತಂದೆ ರಾಮರಾಜಯ್ಯ ಮತ್ತು ತಾಯಿ ತಿಮ್ಮಾಜಮ್ಮನವರಿಗೆ ಪುಣ್ಯವಾಗಲೆಂದು "ಅಂನದಾನಿ ಮಲ್ಲಿಕಾರ್ಜುನಸ್ವಾಮಿಯ ಅಂಗರಂಗ ವೈಭವದ ಭೋಗಪಡಿಗೆ" ಮಳಲವಾಡಿ ಸೀಮೆಯನ್ನು ನೀಡಿದನು. ಈ ದಾನಕ್ಕೆ ಮೇಲುಕೋಟೆಯ ಶೆಲ್ವಪಿಳ್ಳೆ ಮತ್ತು ಆಳ್ವಾರರು ಸಾಕ್ಷಿಗಳಾಗಿರುವುದು ಗಮನ ಸೆಳೆಯುತ್ತದೆ. ಶಾಸನದ ಕಾಲ ಕ್ರಿ. ಶ. ೧೬೦೭ ಏಪ್ರಿಲ್ ೧೯. ಶಾಸನೋಕ್ತ ಚಂಗಾಳ್ವ ಪ್ರಭು – ರುದ್ರಗಣನ ಇನ್ನೊಂದು ಹೆಸರು ಪಿರಿಯರಾಜ. ಈತ ಶ್ರೀಕಂಠನ ಮಗ ಹಾಗೂ ನಂಜುಂಡನ ಮೊಮ್ಮಗ.

ಜನಪದ ವೀರಕಾವ್ಯ 'ಪಿರಿಯಾಪಟ್ಟಣದ ಕಾಳಗ'ದ ಪ್ರಕಾರ ಚಂಗಾಳ್ವರ ಕೊಟ್ಟಕೊನೆಯ ರಾಜ ವೀರರಾಜ. ಪಿರಿಯಾಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೧೬೧೯–೧೬೪೪ರವರೆಗೆ ರಾಜ್ಯಭಾರ ಮಾಡಿದ ಚಂಗಾಳ್ವ ವೀರರಾಜಯ್ಯನು ಮಡಿಕೇರಿಯನ್ನಾಳುತ್ತಿದ್ದ ಹಾಲೇರಿ ರಾಜರ ಬಂಧುವಾಗಿದ್ದ. ಇವನ ಕಾಲಕ್ಕಾಗಲೆ ಜೈನಧರ್ಮ ಸಂಪೂರ್ಣವಾಗಿ ನಶಿಸಿಹೋಗಿದ್ದುದಲ್ಲದೆ ಮಲ್ಲಿನಾಥ ಬಸದಿಗಳು ಮಲ್ಲಯ್ಯನ ದೇವಾಲಯಗಳಾಗಿ ಚಂಗಾಳ್ವರಲ್ಲಿ ಕೆಲವರಾದರೂ ವೀರಶೈವ ಧರ್ಮಾವಲಂಬಿಗಳಾಗಿದ್ದರು.

**ಚಂಗಾಳ್ವ–ಮೈಸೂರು ಸಂಬಂಧ :** ಪಿರಿಯಾಪಟ್ಟಣದ ಚಂಗಾಳ್ವರಿಗೂ ಶ್ರೀರಂಗಪಟ್ಟಣದ ಒಡೆಯರಿಗೂ ರಾಜೊಡೆಯನ (೧೫೧೭–೧೬೧೭) ಕಾಲದಿಂದಲೂ ಯುದ್ಧಗಳು ನಡೆಯುತ್ತಲೇ ಇದ್ದವು. ರಾಜವೊಡೆಯ ಪಿರಿಯಾಪಟ್ಟಣಕ್ಕೆ ಸೇರಿದ್ದ

ಸೆರೂರು ಮತ್ತು ಮಾವತ್ತೂರುಗಳನ್ನು ವಶಪಡಿಸಿಕೊಂಡ. ಕಂಠೀರವ ನರಸರಾಜ ಮೊದಲ ಮುತ್ತಿಗೆಯಲ್ಲಿ ಚಂಗಾಳ್ವರಿಗೆ ಸೇರಿದ ಅರಕಲಗೂಡು ಮತ್ತು ಬೆಟ್ಟದಪುರಗಳನ್ನು ವಶಪಡಿಸಿಕೊಂಡ. ನರಸರಾಜನ ದಳವಾಯಿ ೧೬೪೪ರಲ್ಲಿ ಪಿರಿಯಾಪಟ್ಟಣವನ್ನು ಮುತ್ತಿ ಹನ್ನೆರಡು ತಿಂಗಳುಗಳ ಕಾಲ ಸತತವಾಗಿ ಹೋರಾಡಿ ಪಿರಿಯಾಪಟ್ಟಣವನ್ನು ಮೈಸೂರಿನ ಅಧೀನಕ್ಕೆ ತೆಗೆದುಕೊಂಡ. ದಳವಾಯಿ ಮುತ್ತಿಗೆ ಹಾಕಿದಾಗ ಪಿರಿಯಾಪಟ್ಟಣವನ್ನು ಆಳುತ್ತಿದ್ದವನು ಚಂಗಾಳ್ವ ಅರಸ ವೀರರಾಜ.

ಮೈಸೂರು ಸೈನ್ಯ ಪಿರಿಯಾಪಟ್ಟಣವನ್ನು ೧೬೪೪ರಲ್ಲಿ ಮುತ್ತಲು ಕಾರಣವೆಂದರೆ ಪಿರಿಯಾಪಟ್ಟಣದ ರಾಜನು ಮೈಸೂರು ಅರಸನಿಗೆ ವಾರ್ಷಿಕ ಪೊಗದಿಯಾಗಿ ಮೂರುಸಾವಿರ ವರಹಗಳನ್ನು ಕೊಡಬೇಕೆಂದು ತೀರ್ಮಾನವಾಗಿತ್ತು. ಈ ಒಪ್ಪಂದವನ್ನು ಮುರಿದ ಪಿರಿಯಾಪಟ್ಟಣದ ರಾಜನಿಗೂ ಮೈಸೂರು ಅರಸರಿಗೂ ಯುದ್ಧ ನಡೆಯಿತೆಂದು ಇತಿಹಾಸ ಹೇಳುತ್ತಿದೆ. ಈ ಯುದ್ದವನ್ನು ಪ್ರೊನೇಜ ಎಂಬ ಪಾದ್ರಿಯು, ಮೂಗುಗಳಿಗಾಗಿ ನಡೆದ ಯುದ್ಧವೆಂದು ವರ್ಣಿಸಿದ್ದಾನೆ. ಎದುರಾಳಿಗಳ ಮೂಗು ಕತ್ತರಿಸಬೇಕೆಂದು ಕಂಠೀರವ ನರಸರಾಜ ಆಜ್ಞೆಯಿತ್ತನೆಂಬುದು ಅವನ ಅಭಿಪ್ರಾಯ. ಕಂಠೀರವ ನರಸರಾಜನು ಎದುರಾಳಿಗಳ ಮೂಗನ್ನು ಕತ್ತರಿಸಿ ಅವರನ್ನು ವಿಕಾರಗೊಳಿಸುತ್ತಿದ್ದುದಲ್ಲದೆ ಅತ್ಯಂತ ಕ್ರೂರ ರೀತಿಯಲ್ಲಿ ಅವರು ನರಳಿ ನರಳಿ ಸಾಯುವಂತೆ ಮಾಡುತ್ತಿದ್ದನಂತೆ. ಈ ರೌದ್ರಭೀಕರ ಯುದ್ಧದ ಘಟನಾವಳಿಗಳು ಜನಪದ ಸಾಹಿತ್ಯದಲ್ಲಿ 'ಪಿರಿಯಾಪಟ್ಟಣದ ಕಾಳಗ' ಎಂಬ ಹೆಸರಿನ ಹಾಡುಗಬ್ಬವಾಗಿ ಉಳಿದು ಬಂದು ಜನಮನದಲ್ಲಿ ಹಚ್ಚ ಹಸುರಾಗಿ ಚಂಗಾಳ್ವರ ಹೆಸರನ್ನು ಚಿರವಾಗಿಸಿವೆ; ಪಿರಿಯಾಪಟ್ಟಣದ ಹೆಸರನ್ನು ಅಮರವಾಗಿಸಿವೆ. ಆದರೆ, ಇದು ಮೂಗುತಿ(ಹೆಣ್ಣಿ)ಗಾಗಿ ನಡೆದ ಯುದ್ಧ. ಅದೇ ನೈಜ ಕಾರಣವಾಗಿತ್ತು ಎಂಬ ಅಭಿಪ್ರಾಯವೂ ಇದೆ. ಮುಂದೆ ಪಿರಿಯಾಪಟ್ಟಣವು (ಹೈದರಾಲಿ, ಟಿಪ್ಪುಸೂಲ್ತಾನರ ಕಾಲದಲ್ಲಿ) ಮೈಸೂರು ಮತ್ತು ಕೊಡಗಿನ ಅರಸರ ಹೋರಾಟದ ಕಣವಾಯಿತು. ಕೊಡಗಿನ ವೀರರಾಜೇಂದ್ರನನ್ನು ಪಿರಿಯಾಪಟ್ಟಣದ ಕೋಟೆಯಲ್ಲಿ ನಾಲ್ಕು ವರ್ಷಗಳ ಕಾಲ ಬಂಧಿಯಾಗಿರಿಸಲಾಗಿತ್ತು. ಅನಂತರ ಪಿರಿಯಾಪಟ್ಟಣ ಉಳಿದಿದ್ದರೂ ಅವಸಾನಗತಿಯಲ್ಲಿತ್ತು.

ಸ್ವಾತಂತ್ರ್ಯಪೂರ್ವದವರೆಗೆ ಪಿರಿಯಾಪಟ್ಟಣದ ಎರಡು ಸುತ್ತಿನ ಕೋಟೆ ಭದ್ರವಾಗೇ ಇತ್ತು. ಜನರಿಗೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಕೋಟೆಯ ಭಾರಿಭಾರಿ ಕಲ್ಲುಗಳು ಕಣ್ಮರೆಯಾಗಿ ಕೇವಲ ಮಣ್ಣಿನ ಕೋಟೆಯ ಕುರುಹುಗಳು ಉಳಿದಿವೆ. ಮೈಸೂರು ಜಿಲ್ಲಾ ಗ್ಯಾಸೆಟಿಯರ್ ಸಹ ಇಲ್ಲಿರುವುದು ಮಣ್ಣಿನ ಕೋಟೆ ಎಂದು ದಾಖಲಿಸಿದೆ. ಅಪವಾದಕ್ಕೆಂಬಂತೆ ಈಗಲೂ ಹೊರಕೋಟೆಯ ಕೆಲವು ಭಾಗಗಳಲ್ಲಿ ಅಭೇದ್ಯ ಕೋಟೆಯ ಕಲ್ಲಿನ ಅವಶೇಷವನ್ನು ಕಾಣಬಹುದು. ಕೋಟೆಯ ಎರಡು ಮಹಾದ್ವಾರಗಳು ಸಂಪೂರ್ಣ ಶಿಲಾಮಯವಾಗಿದ್ದು ಹಾಳಾದ ನಗರದ ಅಳಿದುಳಿದ ಇತಿಹಾಸದ ಕುರುಹಾಗಿವೆ. ಇದನ್ನು ಸಂರಕ್ಷಿಸಿ ಕಾಪಾಡಿಕೊಳ್ಳುವುದು ಆಡಳಿತದ ಮತ್ತು ಜನರ ಕರ್ತವ್ಯ.

## ಚಂಗಾಳ್ವರ ವಂಶಾವಳಿ–I – ೧೦ನೇ ಶತಮಾನದಿಂದ ೧೪ನೇ ಶತಮಾನದವರೆಗೆ

ರಾಜೇಂದ್ರಚೋಳ, ವೀರರಾಜೇಂದ್ರ ನನ್ನಿ ಚಂಗಾಳ್ವ (೧೦೩೦ ರಿಂದ ೬೦)
(ಬೆಟ್ಟದಪುರದ ಕೋಟೆ ಕಟ್ಟಿದವನು)
|
ಚಂಗಲರಾಯ
|
ನಿಗಳಂಕ ಮಲ್ಲ ಮಾಚೆಯರಸ (ಮಾದೆಯರಸ) ಚಂಗಾಳ್ವ (ಸು. ೧೦೯೦)
|
ಚಂಗಾಳ್ವ ದೇವ ಮಹದೇವ, ಮಾದೇವರಸ, ಮಾದೇವಣ್ಣ (ಸು. ೧೦೯೧ ರಿಂದ ೯೫)
|
ಮಹಾಮಂಡಲೇಶ್ವರ ಕುಲೋತ್ತುಂಗ ಚೋಳ ಒಡಿಯಾದಿತ್ಯ (ಸು. ೧೦೯೭)
|
ಚಂಗಾಳ್ವ (ಸು. ೧೧೨೪ ರಿಂದ ೧೧೫೫)
|
ಮಹದೇವ (೧೧೬೯, ೧೦೭೧–೧೧೭೩ ಪಾಲ್ಪರೆ ಯುದ್ಧ)
|
ಕುಲೋತ್ತುಂಗ ಚೋಳ ಚಂಗಾಳ್ವ ಪೆಮ್ಮವೀರರಸ (೧೧೭೫–೧೧೮೩)
|
ಸೋಮದೇವ ಮತ್ತು ಬೊಪ್ಪದೇವರಸ (೧೨೪೫–೫೨)
(ಕೊಡಗು ಶ್ರೀರಂಗಪಟ್ಟಣದಿಂದ ಆಳಿದವರು)
|
ಮಲ್ಲದೇವ ಮತ್ತು ಹರಿಹರ (೧೨೮೦–೧೩೦೦)

## ಚಂಗಾಳ್ವರ ವಂಶಾವಳಿ–II – ೧೬ನೇ ಶತಮಾನದಿಂದ ೧೭ನೇ ಶತಮಾನದವರೆಗೆ

ಚಂಗಾಳ್ವ
|
ನಾಗ
|
ರಂಗ
|

ಪಿರಿಯ, ಪಿರಿಯಣ್ಣ

ನಂಜರಾಜ (೧೫೦೨–೨೫) — ಮಹದೇವ (ಕ್ರಿ.ಶ. ೧೫೦೨–೨೫)

ನಂಜುಂಡರಾಜ, (೧೫೨೫–೪೦)
(ಪಿರಿಯಾಪಟ್ಟಣದಲ್ಲಿ ಮಣ್ಣಿನಕೋಟೆ ಕಟ್ಟಿದವನು)

ಶ್ರೀಕಂಠರಾಜಯ, ಶ್ರೀ ಕಂಠರಾಜರಸು, ಚನ್ನಯ್ಯ (೧೫೪೦–೬೦)
(ಕಂಠಾಪುರ ಕಟ್ಟಿದವನು)

ವೀರರಾಜಯ್ಯ, ವೀರರಾಜವೊಡೆಯ ಚಿಕ್ಕರಾಜಯ್ಯ (೧೫೬೦–೮೫) — ಪಿರಿಯಾರಾಜಯ್ಯದೇವರುದ್ರಗಣ (ಪಿರಿಯಾಪಟ್ಟಣದಲ್ಲಿ ಕಲ್ಲಿನಕೋಟೆ ಕಟ್ಟಿದವನು) — ನಂಜರಾಜಯ್ಯ ದೇವ (ನಂಜುಂಡದೇವ, ಕೃಷ್ಣರಾಜ) ೧೬೧೨–೧೭೧೯

ವೀರಪ್ಪರಾಜಯ್ಯ (೧೫೮೫–೧೬೨೦) — ಪಿರಿಯೊಡೆಯ

ಮಲ್ಲಿರಾಜ (ಕೃಷ್ಣರಾಜಯ್ಯದೇವ ?) — ವೀರರಾಜ — ಚಂದೇಅರಸು

ಪಿರಿಯಪಟ್ಟಣದ ಕಾಳಗದ ಕಥಾನಾಯಕ

ಚಾಮುಂಡಿ — ವೀರಣ್ಣ

## ಸ್ವಾತಂತ್ರ್ಯ ಹೋರಾಟ

ದೇಶದ ಮೂಲೆ ಮೂಲೆಗಳಲ್ಲೂ ಅನುರಣಿಸುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ದುಂದುಭಿಗಳಿಗೆ ಮಾರ್ದನಿ ಕೊಟ್ಟು ಪಿರಿಯಾಪಟ್ಟಣ ತಾಲ್ಲೂಕು ಸಹ ದೇಶದ ಸ್ವಾತಂತ್ರ ಚಳುವಳಿಯ ನಕಾಶೆಯಲ್ಲಿ ಒಂದು ಸ್ಥಾನ ಪಡೆಯುವಂತೆ ಮಾಡಿದ ಕೆಲವು ಮಹನೀಯರ ಸ್ಥೂಲ ಪರಿಚಯ ಇಲ್ಲಿದೆ.

ಕಂಪಲಾಪುರದ ಕೆ.ವಿ. ನಾರಾಯಣ ರಾವ್ ತಾಲ್ಲೂಕಿನ ಅತ್ಯಂತ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಹುಣಸೂರಿನ ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ

ಮಾಡುತ್ತಿದ್ದ ಇವರು, ೧೯೩೦ ರಲ್ಲಿ ಗಾಂಧೀಜಿಯವರು ಕಣ್ಣಾನೂರಿಗೆ ಹೋಗುವ ಮಾರ್ಗದಲ್ಲಿ, ದೇಶದ ಸ್ಥಿತಿ ಗತಿಯ ಬಗ್ಗೆ ಮಾಡಿದ ಚುಟುಕಾದ ಭಾಷಣದಿಂದ ಪ್ರಭಾವಿತರಾದರು. "ಮಾಡು ಇಲ್ಲವೇ ಮಡಿ" ಘೋಷಣೆಯ ಅಂಗವಾಗಿ ಬುಡಮೇಲು ಕೃತ್ಯಗಳಲ್ಲಿ ತೊಡಗಿದ್ದಾಗ ಸಂಸ್ಥಾನದ ಪೊಲೀಸರಿಂದ ಬಂಧನಕ್ಕೊಳಗಾಗಿ ಬೆಂಗಳೂರಿನ ಜೈಲ್ ಸೇರಿದರು. ಅದಕ್ಕೂ ಮುಂಚೆ, ಇದೇ ಸಮಯದಲ್ಲಿ ಇವರು, ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಗಾಂಧೀಜಿಯವರ ಮೊಮ್ಮಗ ಕಾಂತಿಲಾಲ್ ಗಾಂಧಿಯವರು ಬಂಧಿತರಾಗುವುದನ್ನು ತಪ್ಪಿಸಲು ಕಂಪಲಾಪುರದಲ್ಲಿ ಕೊಂಚಕಾಲ ಅವರನ್ನು ಅಡಗಿಸಿಟ್ಟಿದ್ದರು. ಆ ವೇಳೆಯಲ್ಲಿ ಕಾಂತಿಲಾಲ್ ಗಾಂಧಿಯವರು ನಾರಾಯಣರಾಯರಿಗೆ ಈ ರೀತಿಯ ಬುಡಮೇಲು ಕೃತ್ಯಗಳಲ್ಲಿ ತೊಡಗಲು ಪ್ರೇರಣೆ ನೀಡಿದ್ದರಂತೆ.

೧೯೩೦ರ ದಶಕದ ಕೊನೆಯ ಭಾಗದಲ್ಲಿ, ಕೆ.ವಿ. ನಾರಾಯಣರಾಯರ ಪ್ರೇರಣೆಯ ಮೇರೆಗೆ, ಕಾಂಗ್ರೆಸ್ ಸದಸ್ಯರಾಗಿ ನೋಂದಾಯಿಸಿಕೊಂಡ ತಾಲ್ಲೂಕಿನ ಪ್ರಥಮರಲ್ಲಿ ಸತ್ಯಾಗಾಲದ ಮಲ್ಲಪ್ಪ ಹಾಗೂ ಪಂಚಳ್ಳಿಯ ಶಿವಯ್ಯನವರೂ ಪ್ರಮುಖರು. ೧೯೩೦ರ ದಶಕದ ಕೊನೆಯಲ್ಲಿ ಪಿರಿಯಾಪಟ್ಟಣದ ಪುಟ್ಟರಾಜಪ್ಪ ಅಮೀರ್ ಸಾಹೇಬರು ಮತ್ತು ಬುಡನ್ ಸಾಹೇಬರು, ಪಟ್ಟಣದಲ್ಲಿ ಪ್ರಥಮ ಕಾಂಗ್ರೆಸ್ ಸದಸ್ಯರಾದರು. ಪಿರಿಯಾಪಟ್ಟಣದ ಪಿ.ಡಿ. ಕೆಂಪೇಗೌಡ (ಅಡ್ಡ ಹೆಸರು ರಾಜಪ್ಪ), ಮೈಸೂರಿನಲ್ಲಿ ಓದುತ್ತಿದ್ದಾಗ ಸ್ವದೇಶಿ ಚಳವಳಿಯಲ್ಲಿ ಪಾಲ್ಗೊಂಡು ವಿದೇಶಿ ವಸ್ತುಗಳನ್ನು ಸುಡುವುದರ ಮೂಲಕ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸಿದವರು. ಕೊಪ್ಪದ ಬಿ.ಎಸ್. ಶ್ರೀಕಂಠಯ್ಯ ೧೯೩೦ರ ದಶಕದಲ್ಲಿ ವಿದ್ಯಾರ್ಥಿದೆಸೆಯಲ್ಲಿಯೇ ಮೈಸೂರಿನಿಂದ ಹುಬ್ಬಳ್ಳಿಗೆ ಸೇವಾದಳದ ಕಾರ್ಯಕರ್ತರಾಗಿ ಶಿಕ್ಷಣ ಪಡೆದು ಉತ್ತರ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿ, ಜೈಲುವಾಸ ಅನುಭವಿಸಿ ಪೋಲೀಸರ ಪಟ್ಟಿಯಲ್ಲಿ ಒಂದು ಖಾಯಂ ಸ್ಥಾನ ಪಡೆದುಕೊಂಡಿದ್ದರು. ಕಂಪಲಾಪುರದ ರಾಚಯ್ಯ ಮತ್ತು ಸಿದ್ದಪ್ಪ ಸೋದರರು ಅದೇ ಗ್ರಾಮದ ಮೂಲ ಕಾಂಗ್ರೆಸ್ ಕಾರ್ಯಕರ್ತರಾದ ಕೆ. ವಿ. ನಾರಾಯಣರಾಯರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳವಳಿ ಮತ್ತು ಕಾಂಗ್ರೆಸ್ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ರಾಚಯ್ಯ ಮತ್ತು ಸಿದ್ಧಪ್ಪ ಸೋದರರ ಒಡನಾಡಿಗಳಾಗಿದ್ದ ತಮ್ಮಣ್ಣಾಚಾರ್ರು ಕಂಪಲಾಪುರದ ಪಂಚರಲ್ಲಿ ಒಬ್ಬರಾಗಿದ್ದು, "ಭಾರತ ಬಿಟ್ಟು ತೊಲಗಿ" ಚಳವಳಿಯ ಬುಡಮೇಲು ಕೃತ್ಯಗಳಲ್ಲಿ ಭಾಗವಹಿಸಿ, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಲು, ಕಂಬಗಳನ್ನು ಉರುಳಿಸಲು ಮತ್ತು ಮರಗಳನ್ನು ಕಡಿದು ರಸ್ತೆಗಳನ್ನು ಬಂದ್ ಮಾಡಲು ಹತ್ಯಾರಗಳನ್ನು ಇತರರಿಗೆ ಒದಗಿಸಿ ಸಹಾಯ ಮಾಡಿದರೆಂಬ ಆಪಾದನೆಯ ಮೇಲೆ ಬಂಧಿಸಲ್ಪಟ್ಟು ಸೆರೆವಾಸ ಅನುಭವಿಸಿದರು. ಕಂಪಲಾಪುರದ ಪಂಚರಲ್ಲಿ ಒಬ್ಬರಾಗಿದ್ದ ಕೆ.ಆರ್. ವೀರಣ್ಣಯ್ಯ ಸಹ ರಾಚಯ್ಯ, ಸಿದ್ದಪ್ಪ, ತಮ್ಮಣ್ಣಾಚಾರ್ ಅವರುಗಳೊಡನೆ ೧೯೪೨ರ ಚಳವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದವರು. ಹಿಂದುಳಿದ ವರ್ಗಕ್ಕೆ ಸೇರಿದ ಸುಂಡವಾಳಿನ ಎಸ್.ಎಸ್. ತಿಮ್ಮಪ್ಪಶೆಟ್ಟಿಯವರು ೧೯೪೨ರ 'ಭಾರತ

ಬಿಟ್ಟು ತೊಲಗಿ' ಚಳವಳಿಯಲ್ಲಿ ವಿದ್ಯಾರ್ಥಿ ದೆಸೆಯಲ್ಲಿಯೇ, ಬುಡಮೇಲು ಕೃತ್ಯಗಳಲ್ಲಿ, ತೊಡಗಿ ಬಂಧನಕ್ಕೊಳಗಾಗಿ ಸುಮಾರು ಒಂದೂವರೆ ತಿಂಗಳು ಕಾಲ ಸೆರೆವಾಸ ಅನುಭವಿಸಿದರು. ೧೯೪೭ರ "ಮೈಸೂರು ಚಲೋ" ಚಳವಳಿಯಲ್ಲೂ ಸಹ ಭಾಗವಹಿಸಿದ್ದರು. ಸೇಂದಿ ಕಂಟ್ರಾಕ್ಟರ್ ಆಗಿದ್ದ ಹಬಟೂರಿನ ರಾಮಕೃಷ್ಣಯ್ಯ ಸ್ವಾತಂತ್ರ್ಯ ಚಳವಳಿಯಲ್ಲಿ ಮತ್ತು ಕಾಂಗ್ರೆಸ್ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸ್ವಾತಂತ್ರ್ಯ ಚಳವಳಿ ಮತ್ತು ಕಾಂಗ್ರೆಸ್ ರಾಜಕೀಯದಿಂದ ಪ್ರಭಾವಿತರಾಗಿದ್ದ ಚನ್ನೇನಹಳ್ಳಿಯ ಟಿ. ವೆಂಕಟರಾಮು ದೇಶಕ್ಕೆ ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ಮೇಲೆ, ಭಾರತದ ಒಕ್ಕೂಟದಿಂದ ಹೊರಗೆ ಉಳಿದಿದ್ದ, ಮೈಸೂರು ಸಂಸ್ಥಾನವನ್ನು ಒಕ್ಕೂಟಕ್ಕೆ ಸೇರುವಂತೆ ಒತ್ತಾಯ ತರಲು ಜರುಗಿದ "ಮೈಸೂರ್ ಚಲೋ" ಚಳವಳಿಯಲ್ಲಿ ಭಾಗವಹಿಸಿದ್ದರು.

ತಾಲ್ಲೂಕಿನ ರಾವಂದೂರು ಬಳಿಯಿರುವ ಹರಳಹಳ್ಳಿಯ ಎಚ್.ಎಂ. ಚೆನ್ನಬಸಪ್ಪನವರು ಬಿ.ಎಸ್ಸಿ. ಪದವೀಧರರಾಗಿದ್ದರೂ ಉದ್ಯೋಗ ಹುಡುಕಿ ಹೋಗಲಿಲ್ಲ. ಅವರ ಅಭಿರುಚಿ ವ್ಯವಸಾಯ. ಮೈಸೂರಿನ ಕೋಮುವಾರು ಸಂಸ್ಥೆಗಳು ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನಲ್ಲಿ ವಿಲೀನವಾದ ಮೇಲೆ ಮೈಸೂರು ಜಿಲ್ಲೆಯಿಂದ ಪ್ರಜಾಪ್ರತಿನಿಧಿಸಭೆ, ಜಿಲ್ಲಾ ಬೋರ್ಡು ಮೊದಲಾದ ಸಂಸ್ಥೆಗಳಿಗೆ ಹುರಿಯಾಳುಗಳನ್ನು ಆರಿಸುವ ಕಾರ್ಯನಡೆದಿತ್ತು. ಆಗಿನ ಕಾಲದಲ್ಲಿ ವೀರಶೈವರ ನಾಯಕರಾಗಿದ್ದ ಪುಟ್ಟಸ್ವಾಮಿಯವರ ಪ್ರಭಾವ ಮೈಸೂರು ಜಿಲ್ಲೆಯಲ್ಲಿ ಅಪಾರ. ಅಂತಹ ಸಮಯದಲ್ಲಿ ಲಿಂಗಾಯಿತರಾದ ಚೆನ್ನಬಸಪ್ಪನವರು ಕಾಂಗ್ರೆಸ್ ಸಂಸ್ಥೆ ಸೇರಿ ಪುಟ್ಟಸ್ವಾಮಿಯವರನ್ನು ಎದುರಿಸಿದರು. ಕಾಂಗ್ರೆಸ್ಸಿನ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ಸ್ವಾತಂತ್ರ್ಯಾನಂತರ ಮಂತ್ರಿಯಾಗಿ ಸುಮಾರು ಮೂರು ದಶಕಗಳ ಅವಧಿಯಲ್ಲಿ ಉತ್ಕೃಷ್ಟ ರೀತಿಯ ಜನೋಪಯೋಗಿ ಕೆಲಸಗಳನ್ನು ಮಾಡಿದರು. ಎಚ್.ಎಂ. ಚೆನ್ನಬಸಪ್ಪನವರ ಮಗನಾದ ಎಚ್.ಸಿ. ವಿಶ್ವನಾಥ್ ಇವರು ಕ್ವಿಟ್ ಇಂಡಿಯಾ ಚಳವಳಿ, ಮೈಸೂರು ಚಲೋ ಚಳುವಳಿ ಇತ್ಯಾದಿಗಳಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು.

ರಾವಂದೂರಿನ ಆರ್.ಎಸ್. ಸಣ್ಣಪ್ಪಾಜಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಿದ್ಯಾರ್ಥಿ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಲ್ಪಕಾಲ ಸೆರೆವಾಸ ಅನುಭವಿಸಿದರು. ಕಣಗಾಲಿನ "ಅಣ್ಣಯ್ಯ ಮೇಷ್ಟ್ರು" ಎಂದು ಹೆಸರಾದ ಆರ್. ಸೂರ್ಯನಾರಾಯಣ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸ್ವಾತಂತ್ರ್ಯಾನಂತರ ಕಣಗಾಲಿನ ಅಭಿವೃದ್ಧಿಗೆ ಬಹುವಾಗಿ ಶ್ರಮಿಸಿದರು. ಬೆಟ್ಟದಪುರದ ಬಿ.ಪಿ. ಸೂರ್ಯನಾರಾಯಣರಾವ್ ಮೈಸೂರಿನಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದ ಸಮಯದಲ್ಲಿ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳವಳಿಯಿಂದ ಆಕರ್ಷಿತರಾಗಿ ಜಿಲ್ಲೆಯ ದಕ್ಷಿಣದ ತಾಲ್ಲೂಕುಗಳಲ್ಲಿ ಪ್ರಚಾರ ಕಾರ್ಯಕೈಗೊಂಡು, ಬಂಧಿತರಾಗಿ ಸೆರೆವಾಸ ಅನುಭವಿಸಿದರು. ಬಿಡುಗಡೆಯನಂತರ ವಿದ್ಯಾಭ್ಯಾಸ ಪೂರ್ಣಗೊಳಿಸಿ ಉದ್ಯೋಗಾರ್ಥಿಗಳಾಗಿ ಪುಣೆ ಮತ್ತು ಮುಂಬೈಗಳಿಗೆ ತೆರಳಿ, ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾಗಿ ಈಗ ಮೈಸೂರಿನಲ್ಲಿ ನೆಲೆಸಿದ್ದಾರೆ.

ಕಾಂಗ್ರೆಸ್ ಸಂಸ್ಥೆಯನ್ನು ತಾಲೂಕಿನಲ್ಲಿ ಸ್ಥಾಪಿಸಿ, ಅದರ ಧ್ಯೇಯೋದ್ದೇಶಗಳನ್ನು ಪ್ರಚಾರಮಾಡುತ್ತ ಸಂಸ್ಥೆಗೆ ಸದಸ್ಯರುಗಳನ್ನು ನೋಂದಾಯಿಸಲಾರಂಭಿಸಿದರು. ಅವರಲ್ಲಿ ಕಂಪಲಾಪುರದ ನಾರಾಯಣರಾವ್, ಹೆಚ್. ಎಂ. ಚನ್ನಬಸಪ್ಪ, ಹಾರನಹಳ್ಳಿಯ ಕರೀಗೌಡ ಮತ್ತು ನಿಂಗೇಗೌಡ ಪ್ರಮುಖರು.

೧೯೪೨ರಲ್ಲಿ ದೇಶಾದ್ಯಂತ ಕಾಂಗ್ರೆಸ್ ಚಳವಳಿ ಪ್ರಬಲವಾಗಿ ಕ್ವಿಟ್ ಇಂಡಿಯಾ, ಪಾನನಿರೋಧ – ಅರ್ಥಾತ್ ಈಚಲಮರದ ನಾಶ ಇತ್ಯಾದಿ ಅಸಹಕಾರ ಚಳುವಳಿಗಳನ್ನು ಹಮ್ಮಿಕೊಂಡಿದ್ದುವು. ಈ ತಾಲೂಕಿನ ಅನೇಕ ಮಹನೀಯರು ಈ ಚಳವಳಿಯಲ್ಲಿ ನೇರವಾಗಿ ಭಾಗವಹಿಸಿ ಅನೇಕ ಕಷ್ಟನಷ್ಟಗಳನ್ನನುಭವಿಸಿದರು. ಲಾವಣಿಸಿದ್ದಪ್ಪ, ಅವರ ಅಣ್ಣ ರಾಚಪ್ಪ, ಕೆ.ವಿ. ನಾರಾಯಣರಾವ್ (ಕಂಪಲಾಪುರದ ನೆಹ್ರೂ) ಚಪ್ಪರದಹಳ್ಳಿ ನಿಂಗೇಗೌಡ, ಕರೀಗೌಡ, ಪಿ.ಕೆ. ಪುಟ್ಟರಾಜಪ್ಪ, ಬಿ.ಎಸ್. ಶ್ರೀಕಂಠಯ್ಯ. ಬಿ.ಪಿ. ಸೂರ್ಯನಾರಾಯಣರಾವ್, ಸುಂಡವಾಳು ತಿಮ್ಮಪ್ಪ, ಈ ತಾಲ್ಲೂಕಿನವರೇ ಆಗಿದ್ದು ಅನಂತರ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ ನಿವಾಸಿಗಳಾಗಿದ್ದ ಈ ರಾಜ್ಯದ ಮುಖ್ಯಮಂತ್ರಿಗಳೂ ಆಗಿದ್ದ ಡಿ. ದೇವರಾಜೇ ಅರಸ್ ಹಾಗೂ ಈ ತಾಲ್ಲೂಕಿನ ನೇತಾರರಾದ ಶ್ರೀ ಎಚ್.ಎಂ. ಚನ್ನಬಸಪ್ಪನವರ ಮಾರ್ಗದರ್ಶನದಲ್ಲಿ ಚಳವಳಿ ನಡೆಸಿ ಗಡೀಪಾರು ಶಿಕ್ಷೆ ಹಾಗೂ ಜೈಲು ಶಿಕ್ಷೆಗಳನ್ನು ಅನುಭವಿಸಿದ್ದರು. ಹೆಚ್.ಕೆ. ವೀರಣ್ಣಗೌಡ, ಮಹಾತ್ಮಗಾಂಧಿಯವರ ಮೊಮ್ಮಗ ಶ್ರೀಕಾಂತಿಲಾಲ್‌ಗಾಂಧಿ, ತಗಡೂರು ರಾಮಚಂದ್ರರಾವ್, ಟಿ. ಮರಿಯಪ್ಪ ಇತ್ಯಾದಿ ಮುಖಂಡರು ಆಗಾಗ್ಗೆ ತಾಲೂಕಿಗೆ ಭೇಟಿನೀಡುತ್ತಾ ಜನಗಳಲ್ಲಿ ಸ್ಫೂರ್ತಿ ತುಂಬಿ ಪ್ರಜಾಪ್ರಭುತ್ವದಲ್ಲಿ ಜನಗಳ ವಿಶ್ವಾಸ ಕುದುರಿಸಿ, ಮುನ್ನಡೆಸಿದರು. ೧೯೪೭ರ ಆಗಸ್ಟ್ ೧೫ರಂದು ಭಾರತದೇಶಕ್ಕೆ ಸ್ವಾತಂತ್ರ್ಯಪ್ರಾಪ್ತವಾಯಿತು. ಬ್ರಿಟಿಷರ ಸಂಕೋಲೆ ಕಳಚಿಬಿತ್ತು. ರಾಷ್ಟ್ರಧ್ವಜ ಹಾರಾಡಿತು. ಎಲ್ಲ ರಾಜ್ಯಗಳೂ ಸ್ವತಂತ್ರವಾದವು. ಆದರೆ ಪ್ರಜಾಪ್ರಭುತ್ವಕ್ಕೆ ರಾಜರ ಒಪ್ಪಿಗೆ ದೊರೆತಿರಲಿಲ್ಲ. ಅಧಿಕಾರವನ್ನು ತಮ್ಮ ಕಪಿಮುಷ್ಟಿಯಲ್ಲೇ ಇಟ್ಟುಕೊಳ್ಳುವ ಬಯಕೆ ಎಲ್ಲರಾಜರುಗಳಲ್ಲೂ ಇತ್ತು. ಇದಕ್ಕೆ ಮೈಸೂರು ಸಂಸ್ಥಾನವೂ ಹೊರತಾಗಿರಲಿಲ್ಲ. ಇದಕ್ಕಾಗಿ ಮತ್ತೊಂದು ಐತಿಹಾಸಿಕ ಚಳವಳಿ ಆರಂಭವಾಯ್ತು. ಅದೇ 'ಅರಮನೆ ಚಲೊ' (ಮೈಸೂರು ಚಲೊ) ಚಳವಳಿ. ಈ ಚಳವಳಿ ನಡೆಸಲು ಮೈಸೂರು ಕಾಂಗ್ರೆಸ್ ಕರೆನೀಡಿತು. ಸಹಸ್ರಾರುಮಂದಿ ನಾ ಮುಂದೆ ತಾ ಮುಂದೆಂದು ಮುನ್ನುಗ್ಗಿ ಚಳವಳಿ ಆರಂಭಿಸಿಯೇ ಬಿಟ್ಟರು. ೧೯೪೭ನೇ ಸೆಪ್ಟೆಂಬರ್‌ನಲ್ಲಿ ಚಳವಳಿ ಆರಂಭವಾಗಿ ಪ್ರಪ್ರಥಮವಾಗಿ ಮುಖಂಡರುಗಳನ್ನು ಜೈಲಿಗೆ ಕಳುಹಿಸಿದರು. ಚಳವಳಿಗೆ ವಿದ್ಯಾರ್ಥಿಗಳೂ ನೇರವಾಗಿ ಧುಮುಕಿದರು, ಆಗ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ಸಿನ ಅಧ್ಯಕ್ಷರು ಈ ತಾಲ್ಲೂಕಿನ ಮುಖಂಡರಾದ ಹೆಚ್.ಸಿ. ವಿಶ್ವನಾಥ್ ಅವರ ಜೊತೆ ತಾಲ್ಲೂಕಿನ ಯುವ ಮುಖಂಡರಾದ ಕೆ.ಎಂ. ಮಲ್ಲಪ್ಪ, ಮುತ್ತೂರು ರಾಮಸ್ವಾಮಿ, ಸುಂಡವಾಳು ತಿಮ್ಮಪ್ಪ, ಪಿ.ಎಸ್. ಅನಂತರಾಮ್, ಪಿ.ಎನ್. ಲಕ್ಷ್ಮೀನಾರಾಯಣ, ಕೆ.ಆರ್. ತಮ್ಮಯ್ಯನವರು, ರಾವಂದೂರಿನ ಸಣ್ಣಪ್ಪಾಜಿ, ಟಿ. ವೆಂಕಟರಾಮಪ್ಪ ಮುಂತಾದವರು ಭಾಗಿಗಳಾಗಿದ್ದು ಪೋಲೀಸರಿಂದ ಲಾಠಿ

ಏಟುತಿಂದವರು ಅನೇಕರು, ಜೈಲುಕಂಡವರು ಕೆಲವರು, ಗಡಿಪಾರಾದವರು ಹಲವರು. ಹೀಗೆ ತಮ್ಮನ್ನು ದೇಶಸೇವೆಯಲ್ಲಿ ತೊಡಗಿಸಿಕೊಂಡರು. ಆಗ ಜಿಲ್ಲಾಬೋರ್ಡು ಅಧ್ಯಕ್ಷರಾಗಿದ್ದ ಹೆಚ್.ಎಂ. ಚನ್ನಬಸಪ್ಪ ಜೈಲುಸೇರಿ ಅಲ್ಲಿಂದಲೇ ಸುಮಾರು ಎರಡು ತಿಂಗಳು ಆಡಳಿತ ನಡೆಸಿ ಆದರ್ಶವ್ಯಕ್ತಿ ಎನಿಸಿಕೊಂಡರು. ಎರಡು ತಿಂಗಳ ತರುವಾಯ ರಾಜಪ್ರಭುತ್ವ ಹಿಂದೆ ಸರಿಯಿತು. ಪ್ರಜಾಪ್ರಭುತ್ವ ಜಾರಿಗೆ ಬಂದಿತು. ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಜನಪ್ರಿಯ ಕಾಂಗ್ರೆಸ್ ಸರಕಾರ ಸ್ಥಾಪನೆಯಾಗಿ ಜನಗಳ ಶ್ರಮ ಸಾರ್ಥಕವಾಯಿತು.

**ರೈತ ಚಳುವಳಿ :** ಸ್ವಾತಂತ್ರ್ಯ ನಂತರದಲ್ಲಿ ಆಹಾರ ಧಾನ್ಯಗಳ ಬೆಲೆ ಕುಸಿತದಿಂದ ತಾಲ್ಲೂಕಿನ ರೈತರು ೧೯೭೫ರಲ್ಲಿ ಎಚ್ಚೆತ್ತು, ದಿವಂಗತ ಡಾ. ಕೆ.ಆರ್. ತಮ್ಮಯ್ಯನವರ ಮುಖಂಡತ್ವದಲ್ಲಿ ಮೊದಲು ಸಂಘಟಿತರಾದರು. ಪಕ್ಷಾತೀತವಾದ 'ಕರ್ನಾಟಕ ರಾಜ್ಯ ರೈತ ಸಂಘ' ವನ್ನು ತಾಲೂಕಿನಲ್ಲೂ ಸ್ಥಾಪಿಸಿದರು. ಜೋಗನಹಳ್ಳಿ ಗುರುಮೂರ್ತಿ ಇದರ ಮೊದಲ ಮುಖಂಡತ್ವ ವಹಿಸಿದ್ದು, ಯುವಕರಾದ ದಿವಂಗತ ಕಿತ್ತೂರು ಡಿ.ಎಂ. ನಟೇಶ್, ಕೆಲ್ಲೂರು ಸುರೇಶ್ ಮುಂತಾದವರು ಮುಂಚೂಣಿಯಲ್ಲಿ ನಿಂತು ಚಳವಳಿಯನ್ನು ಬಿರುಸುಗೊಳಿಸಿದರು. ಮೊಟ್ಟ ಮೊದಲಿಗೆ ರಾಜ್ಯ ರೈತ ಸಂಘದ ಗ್ರಾಮಘಟಕವನ್ನು ಕೆಲ್ಲೂರಿನಲ್ಲಿ ಆರಂಭಿಸಿದರು. ಸಿ.ಪಿ.ಸಿ. ೬೦, ೬೧ರ ಮೇರೆಗೆ ರೈತನ ಅಗತ್ಯವಸ್ತುಗಳನ್ನು ಸಹಕಾರ ಅಥವಾ ಸರ್ಕಾರಿ ವಸೂಲಿ ಅಧಿಕಾರಿಗಳು ಜಪ್ತಿ ಅಥವಾ ಹರಾಜು ಮಾಡಬಾರದು. ಈ ಬಗ್ಗೆ ಆಗಲೇ ರಾಜ್ಯ ಹೈಕೋರ್ಟ್ ತಡೆಯಾಜ್ಞೆ ನೀಡಿದೆ – ಎಂಬ ವಿಚಾರವನ್ನು ರೈತ ಮುಖಂಡರು ಜನರಿಗೆ ಕೂಲಂಕಶವಾಗಿ ತಿಳಿಯಪಡಿಸಿದರು. ರೈತ ಮುಖಂಡರುಗಳ ಮನೆಯನ್ನೇ ಜಪ್ತಿ ಮಾಡಿದಾಗ, ಜಪ್ತಿ ವಿರುದ್ಧ ಮತ್ತೆ ಹೈಕೋರ್ಟಿನಲ್ಲಿ ತಡೆ ಆಜ್ಞೆ ತರಲಾಯಿತು.

ದೇಶದ ಬೇರೆ ಬೇರೆ ರಾಜ್ಯಗಳಲ್ಲಿಯ ರೈತ ಚಳವಳಿಗೂ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕ್ರಮಗಳಿಗೂ ತುಂಬ ವ್ಯತ್ಯಾಸವಿತ್ತು, ಬೇರೆ ರಾಜ್ಯದಲ್ಲಿಯ ರೈತರು ಬೆಳೆಗೆ ವೈಜ್ಞಾನಿಕ ಬೆಲೆಕೊಡಿ ಎಂಬ ಏಕಾಂಶದ ಹೋರಾಟಮಾಡುತ್ತಿದ್ದರೆ, ನಮ್ಮ ರೈತರು ಹಳ್ಳಿಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಬದಲಾವಣೆ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ಹೋರಾಟ ಮಾಡುತ್ತಿದ್ದರು.

ಈ ಸಂದರ್ಭದಲ್ಲಿ ಕೆಲ್ಲೂರಿನ ರೈತರು ಕುಡಿಯುವ ನೀರಿಗಾಗಿ ಹೋರಾಟ ಮಾಡಿದರು. ಖಾಲಿ ಕೊಡಗಳನ್ನು ಹೊತ್ತು ಕೆಲ್ಲೂರಿನಿಂದ ಪಿರಿಯಾಪಟ್ಟಣದವರೆಗೆ ನಡೆದು ಬಂದ ನೂರಾರು ಜನ ರೈತರು ಕುಡಿಯುವ ನೀರಿನ ವ್ಯವಸ್ಥೆಗಾಗಿ ಆಗ್ರಹಿಸಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯ ಕಛೇರಿಮುಂದೆ ಧರಣಿ ಕುಳಿತರು. ಅವರು ಧರಣಿ ಕುಳಿತ ಕೆಲವೇ ಗಂಟೆಗಳಲ್ಲಿ ಅವರ ಸಮಸ್ಯೆಯನ್ನು ಅಧಿಕಾರಿಗಳು ಬಗೆಹರಿಸಿದರು, ಮಾರನೆಯ ದಿನವೇ ಕೆಲ್ಲೂರಿಗೆ ಹೊಸ ಬೋರ್‌ವೆಲ್ ಕೊರೆಸಿ ಕುಡಿಯಲು ನೀರು ಒದಗಿಸಲಾಯಿತು.

ಕೆಲ್ಲೂರು ರೈತರ ದಿಟ್ಟಹೋರಾಟದಿಂದ ಇತರ ರೈತರೂ ಪಾಠ ಕಲಿತರು. ತಾಲ್ಲೂಕಿನ ಪಂಡಿತವಳ್ಳಿ, ಕಿತ್ತೂರು, ಕಲ್ಯಾಣಿಗೌಡನ ಕೊಪ್ಪಲು, ಮೂಡಲಕೊಪ್ಪಲು, ವಡ್ಡರಹಳ್ಳಿ, ಕೊತ್ತವಳ್ಳಿ, ಕಗ್ಗಲಿಕೊಪ್ಪಲು, ಬೋರೆಕೊಪ್ಪಲು ದಮ್ಮನಹಳ್ಳಿ ಮತ್ತುಕೊಪ್ಪಲು, ಜೋಗನಹಳ್ಳಿ, ಬೂವನಹಳ್ಳಿ, ಬೆಕ್ರೆ, ಕೊಣಸೂರು, ಕೋಮಲಾಪುರ, ಹೊಸಹಳ್ಳಿ, ತಿರುಮಲಾಪುರ, ಗಾಂಧಿನಗರ ಹೀಗೆ, ನೂರಾರು ಹಳ್ಳಿಗಳಲ್ಲಿ ರೈತಸಂಘಗಳು ಉದಯಿಸಿ ರೈತ ಸಂಘದ ಬೋರ್ಡುಗಳು ರಾರಾಜಿಸಿದವು. ರೈತರಿಂದ ಬತ್ತದ ಲೆವಿ ವಸೂಲಿ ಮಾಡುತ್ತಿದ್ದ 'ಲೆವಿ' ತಡೆಗೇಟುಗಳನ್ನು ಕಡೆಗಣಿಸಲಾಯಿತು. ಸರ್ಕಾರಿ ನೌಕರರು ಕೆಲಸದ ವೇಳೆಯಲ್ಲಿ ಕುರ್ಚಿಯಲ್ಲಿ ಕುಳಿತು ಕಟ್ಟುನಿಟ್ಟಾಗಿ ಕೆಲಸ ಮಾಡುವಂತೆ ಆಗ್ರಹಿಸಿ 'ಕಾಲಿಕುರ್ಚಿ' ಚಳವಳಿ ಮಾಡಲಾಯಿತು.

ತಂಬಾಕು ಬೆಳೆಗೆ ನ್ಯಾಯೋಚಿತ ಬೆಲೆ ದೊರೆಯಬೇಕು. ತಂಬಾಕು ಮಂಡಳಿ ಮಾಡಿ ತಂಬಾಕು ವಹಿವಾಟನ್ನು ನಿಯಂತ್ರಿಸಬೇಕು ಎಂಬಿತ್ಯಾದಿ ಬೇಡಿಕೆಗಾಗಿ ತಾಲ್ಲೂಕಿನ ರೈತರು ಹೋರಾಡಿ ಸಾವಿರಾರು ಜನ ರೈತರು ಜೈಲುವಾಸ ಅನುಭವಿಸಿ ಬಂದರು. ಕಾಲಾನಂತರ ತಂಬಾಕು ಮಂಡಳಿಯೂ ಆಯಿತು. ರೈತನ ಮನೆ ಜಪ್ತಿ ಎಂಬುದು ಹೇಳ ಹೆಸರಿಲ್ಲದಂತೆ ಆಯಿತು. ಭತ್ತದ ಲೆವಿ ರದ್ದಾಯಿತು. ರೈತ ಚಳುವಳಿ ರೈತರಿಗೆ ತಂದುಕೊಟ್ಟ ಪ್ರಜ್ಞೆ ಇತಿಹಾಸದಲ್ಲಿ ಎಂದೆಂದಿಗೂ ಮರೆಯುವಂತಹದಲ್ಲ.

**ಚುನಾವಣೆಗಳು**

ಸಂಸ್ಥಾನದಲ್ಲಿ ೧೮೮೧ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಜಾಪ್ರತಿನಿಧಿ ಸಭೆ ದೇಶದ ಚುನಾವಣಾ ಪ್ರಕ್ರಿಯಾ ಇತಿಹಾಸದಲ್ಲೊಂದು ಮೈಲಿಗಲ್ಲಾಗಿದ್ದು, ಇದನ್ನು ಬ್ರಿಟಿಷರು, ತಮ್ಮ ಪ್ರಾಂತಗಳಲ್ಲಿ ಅನುಷ್ಠಾನಕ್ಕೆ ತರುವುದಕ್ಕೂ(೧೮೯೨) ಮೊದಲು ಜಾರಿಗೆ ತಂದಿದ್ದು, ಸಂಸ್ಥಾನದ ಹೆಗ್ಗಳಿಕೆಯಾಗಿತ್ತು. ಆರಂಭದಲ್ಲಿ ಸದಸ್ಯರನ್ನು ಒಂದು ವರ್ಷ ಅವಧಿಗೆ ನಾಮಕರಣ ಮಾಡಲಾಗುತ್ತಿದ್ದು, ೧೮೯೧ರಲ್ಲಿ ತೆರಿಗೆ ಪಾವತಿ ಮೊತ್ತವನ್ನು ಆಧರಿಸಿದ ೧೮ ವರ್ಷಕ್ಕೆ ಮೇಲ್ಪಟ್ಟ ತೆರಿಗೆದಾರರು ಮತ ಹಾಕುವ ಚುನಾವಣಾ ಪದ್ಧತಿ ಜಾರಿಗೆ ಬಂದಿತು. ೧೮೯೪ರ ತಿದ್ದುಪಡಿ ಮೂಲಕ ಸದಸ್ಯತ್ವದ ಅವಧಿಯನ್ನು ಮೂರು ವರ್ಷಕ್ಕೆ ಹೆಚ್ಚಿಸಲಾಯಿತು. ವರುಷದಲ್ಲೆರಡು ಬಾರಿ ಪ್ರಜಾಪ್ರತಿನಿಧಿ ಸಭೆ ಸಮಾವೇಶಗೊಳ್ಳುವ ವ್ಯವಸ್ಥೆ ೧೯೧೭ರಿಂದ ಜಾರಿಗೆ ಬಂದಿತು. ೧೯೨೨ರಲ್ಲಿ ಮಹಿಳೆಯರಿಗೂ ಮತದಾನದ ಹಕ್ಕು ಲಭಿಸಿತು. ೧೯೨೩ರ ತಿದ್ದುಪಡಿ ಕಾಯ್ದೆಯ ಮೂಲಕ ಮತದಾರರ ತೆರಿಗೆ ಅರ್ಹತಾ ಮೊತ್ತವನ್ನು ೨೫ ರೂ. ಭೂಕಂದಾಯ ಇಲ್ಲವೇ ಐದು ರೂ ಮನೆಗಂದಾಯವೆಂದು ನಿಗದಿಪಡಿಸಲಾಯಿತು. ಅಲ್ಲದೆ ಮತದಾರರ ವಯೋಮಿತಿಯನ್ನು ೧೮ ರಿಂದ ೨೧ ವರ್ಷಕ್ಕೆ ಹೆಚ್ಚಿಸಲಾಯಿತು. ಚುನಾವಣೆಯಲ್ಲಿ ಸ್ಪರ್ಧಿಸಲು ಮಹಿಳೆಯರಿಗೆ ೧೯೨೭ರಲ್ಲಿ ಅವಕಾಶ ಕಲ್ಪಿಸಲಾಯಿತು. ಶ್ರೀನಿವಾಸ್ ಅಯ್ಯಂಗಾರ್ ಸಮಿತಿ ೧೯೩೮ರಲ್ಲಿ ನೀಡಿದ ವರದಿಯನ್ನಾಧರಿಸಿ, ೧೯೪೦ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ, ಸದಸ್ಯತ್ವದ

ಕಾಲಾವಧಿಯನ್ನು ಮೂರರಿಂದ ನಾಲ್ಕು ವರ್ಷಗಳಿಗೆ ಏರಿಸಲಾಯಿತು. ಆ ಪ್ರಕಾರ ಪಿರಿಯಾ ಪಟ್ಟಣ ತಾಲೂಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿದ್ದವರನ್ನು ಇಲ್ಲಿ ದಾಖಲಿಸಲಾಗಿದೆ. ಪಿರಿಯಾಪಟ್ಟಣದ ಸುಬ್ಬಣ್ಣಶೆಟ್ಟಿ (೧೮೮೪), ಕರಿಬಸವ ಶೆಟ್ಟಿ (೧೮೯೩), ಹಾರ್‍ನಹಳ್ಳಿ ಸುಬ್ಬರಾವ್ (೧೮೯೦, ೯೯), ಚಿಕ್ಕಸುಬ್ಬರಾವ್ (೧೯೦೯–೧೭), ದೊಡ್ಡಮಾದಪ್ಪ (೧೯೧೯–೨೦), ಬಿ. ಚಂದ್ರಶೇಖರ್ ಉಪಾಧ್ಯಾಯ (೧೯೩೦–೩೩), ಚಿಕ್ಕೆ ಅರಸು (೧೯೩೪–೪೦), ಎಚ್.ಎಂ. ಚನ್ನಬಸಪ್ಪ (೧೯೩೪–೪೦), ಡಿ. ದೇವರಾಜ ಅರಸು (೧೯೪೫–೪೯) ಮುಂತಾದವರು ತಾಲೂಕನ್ನು ಪ್ರತಿನಿಧಿಸಿ ಸೇವೆ ಸಲ್ಲಿಸಿದ್ದಾರೆ.

೧೯೫೨ರಲ್ಲಿ ಪ್ರಥಮವಾಗಿ ಕರ್ನಾಟಕ ವಿಧಾನಸಭೆಗೆ ನಡೆಯಲಾದ ಚುನಾವಣೆಯಲ್ಲಿ ಹುರಿಯಾಳುಗಳಾದ ಎಚ್. ಎಂ. ಚನ್ನಬಸಪ್ಪ ಕಾಂಗ್ರೆಸ್‌ನಿಂದ ಹಾಗೂ ಅವರ ವಿರುದ್ಧ ಪಕ್ಷೇತರರಾದ ಸುಂಡವಾಳ್ ಮರಿಯಪ್ಪ ಸ್ಪರ್ಧಿಸಿದ್ದರು. ಆ ನೇರ ಸ್ಪರ್ಧೆಯಲ್ಲಿ ಸುಂಡವಾಳ್ ಮರಿಯಪ್ಪ ಜಯಭೇರಿ ಹೊಡೆದರು. ಆದರೆ ಮಿಥ್ಯಾರೋಪದ ಕಾರಣದಿಂದ ನ್ಯಾಯಾಲಯದ ತೀರ್ಪಿನಂತೆ ಅವರ ವಿಧಾನಸಭಾ ಸದಸ್ಯತ್ವವೂ ಅನೂರ್ಜಿತಗೊಂಡಿತು. ನಂತರದ ಉಪಚುನಾವಣೆಯಲ್ಲಿ (೧೯೫೪)ಲ್ಲಿ ಎಚ್.ಎಂ. ಚನ್ನಬಸಪ್ಪ ಆಯ್ಕೆಯಾದರು. ೨೦೦೭ರ ಚುನಾವಣಾ ಕ್ಷೇತ್ರ ಪುನರ್ ವಿಂಗಡಣೆಯ ನಂತರವೂ ಇಡೀ ಪಿರಿಯಾಪಟ್ಟಣ ತಾಲೂಕು ಈ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಈ ಹಿನ್ನೆಲೆಯಲ್ಲಿ ೨೦೦೯ರವರೆಗೆ ತಾಲೂಕಿನಲ್ಲಿ ನಡೆದಿರುವ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಗಳ ಫಲಿತಾಂಶವನ್ನು ಇಲ್ಲಿ ನೀಡಲಾಗಿದೆ.

## ಮೈಸೂರು ಲೋಕಸಭಾಕ್ಷೇತ್ರದ ಚುನಾವಣಾ ಫಲಿತಾಂಶ (೧೯೫೨–೨೦೦೯)

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|---|
| ೧ | ೨ | ೩ |
| ೧೯೫೨ ದ್ವಿ ಸದಸ್ಯ ಕ್ಷೇತ್ರ | ೧) ಎನ್.ರಾಚಯ್ಯ (ಭಾರಾಕಾಂ) ೨,೦೯,೨೦೩ (೨೯.೩೭) | ಕ.ಮ.ಪ್ರ.ಪಾ., ೧,೪೨,೩೬೩ (೧೯.೯೯) |
| | ೨) ಎಂ.ಎಸ್.ಗುರುಪಾದಸ್ವಾಮಿ (ಕೆಎಂಪಿಪಿ)೧,೯೬,೧೭೫ (೨೭.೫೪) | ಭಾ.ರಾ.ಕಾಂ., ೧,೬೪,೫೭೭ (೨೩.೧೦) |

| ೧ | ೨ | ೩ |
|---|---|---|
| ೧೯೫೭ ದ್ವಿಸದಸ್ಯ ಕ್ಷೇತ್ರ | ೧) ಎನ್.ಶಂಕರಯ್ಯ (ಭಾರಾಕಾಂ) ೨,೩೯,೫೭೨ (೩೧.೭೧) | ಪ್ರ.ಸ.ಪ., ೧,೮೪,೩೭೦ (೨೪.೪೦) |
| | ೨) ಎಸ್.ಎಂ.ಸಿದ್ಧಯ್ಯ (ಭಾರಾಕಾಂ) ೧,೮೬,೧೯೫ (೨೪-೬೫) | ಪ್ರ.ಸ.ಪ., ೧,೪೫,೩೨೩ (೧೯.೨೪) |
| ೧೯೬೨ ಮೈಸೂರು* | ಎಂ.ಶಂಕರಯ್ಯ (ಭಾರಾಕಾಂ) ೯೭,೯೪೯ (೪,೨೮೫) | ಸ್ವ.ಪ., ೪೦,೦೪೩ (೧೭.೫೨) |
| ೧೯೬೭ ಮೈಸೂರು | ಎಚ್.ಡಿ.ತುಳಸಿದಾಸ್ (ಭಾರಕಾಂ) ೧,೦೮,೮೫೫ (೪೦.೦೯) | ಪಕ್ಷೇತರ, ೯೩,೫೬೬ (೩೪.೪೬) |
| ೧೯೭೧ ಮೈಸೂರು | ಎಚ್.ಡಿ.ತುಳಸಿದಾಸ್ ರಾ.ಕಾಂ (ಜೆ) ೨,೧೩,೭೨೪ (೭೪.೪೧) | ರಾ.ಕಾಂ.(ಎನ್), ೯೬,೨೭೨ (೩೫.೩೧) |
| ೧೯೭೭ ಮೈಸೂರು | ಎಚ್.ಡಿ.ತುಳಸಿದಾಸ್ (ಕಾಂಗ್ರೆ) ೧,೯೫,೬೫೭ (೫೩.೬೮) | ಭಾ.ಮೋ.ದ., ೧,೫೩,೯೪೯ (೪೨.೨೫) |
| ೧೯೮೦ ಮೈಸೂರು | ಎಂ.ರಾಜಶೇಖರ ಮೂರ್ತಿ (ಕಾಂಗ್ರೆ) ೧,೯೫,೭೨೪ (೪೯.೪೭) | ಭಾ.ಪಾ.ಕಾಂ.(ಅರಸು), ೧,೧೨,೬೮೮ (೨೮.೪೮) |
| ೧೯೮೪ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೨,೪೭,೭೫೪ (೫೪.೭೦) | ಪಕ್ಷೇತರ, ೧,೮೩,೧೪೪ (೪೦.೩೩) |
| ೧೯೮೯ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೩,೮೪,೮೮೮ (೫೫.೬) | ಜ.ಪ.(ಜೆ.ಪಿ), ೧,೩೫,೫೨೪ (೧೯.೬) |
| ೧೯೯೧ ಮೈಸೂರು | ಶ್ರೀಮತಿ ಚಂದ್ರಪ್ರಭಾ ಅರಸು (ಕಾಂಗ್ರೆ) ೨,೨೫,೮೮೧ (೩೦.೪೭) | ಭಾ.ಜ.ಪ., ೨,೦೮,೯೯ (೩೬.೫೨) |
| ೧೯೯೬ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರು ೨,೫೮,೨೯ (೩೪.೮೨) | ಜ.ದ., ೨,೪೬,೬೩೨ (೩೩.೨೫) |
| ೧೯೯೮** ಮೈಸೂರು | ಸಿ.ಎಚ್.ವಿಜಯಶಂಕರ್ (ಭಾಜಪ) ೩,೫೫,೮೪೬ (೪೨.೧೦) | ಭಾ.ರಾ.ಕಾಂ., ೨,೫೨,೮೨೨ (೨೯.೯೧) |
| ೧೯೯೯ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರು (ಕಾಂಗ್ರೆ) ೩,೩೮,೦೫೧ (೩೮) | ಭಾ.ಜ.ಪ., ೩,೨೪,೬೨೦ (೩೬) |

| ೧ | ೨ | ೩ |
|---|---|---|
| ೨೦೦೪ ಮೈಸೂರು | ಸಿ.ಎಚ್.ವಿಜಯಶಂಕರ್ (ಭಾಜಪ) ೩,೧೬,೪೪೨ (೩೩.೦೬) | ಜ.ದ.(ಜಾ), ೩,೦೬೪೯೨ (೩೨) |
| ೨೦೦೯ ಮೈಸೂರು | ಎಚ್. ವಿಶ್ವನಾಥ್ (ಭಾರಾಕಾಂ) ೩,೫೪,೮೧೦ (೩೬.೪೩) | ಭಾ.ಜ.ಪ., ೩,೪೭,೧೧೯ (೩೫.೬೪) |

* ಮೈಸೂರು ಜಿಲ್ಲೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ರೂಪಿಸಲಾಯಿತು.

** ಮೈಸೂರು ಜಿಲ್ಲೆಯು ವಿಭಜಿಸಲ್ಪಟ್ಟು (೧೯೯೭) ಚಾಮರಾಜನಗರ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು.

* ಮೈಸೂರು ಲೋಕಸಭಾ ಕ್ಷೇತ್ರವು ಮೈಸೂರು ತಾಲೂಕಿನ ನಾಲ್ಕು (ಕೃಷ್ಣರಾಜ, ನರಸಿಂಹರಾಜ, ಚಾಮುಂಡೇಶ್ವರಿ ಹಾಗೂ ಚಾಮರಾಜ), ಹೆಗಡೆದೇವನಕೋಟೆ, ಹುಣಸೂರು, ಕೃಷ್ಣರಾಜನಗರ ಹಾಗೂ ಪಿರಿಯಾಪಟ್ಟಣ, ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

## ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶಗಳು (೧೯೫೨–೨೦೦೮)

| ಚುನಾವಣಾ | ಆಯ್ಕೆಯಾದ ಅಭ್ಯರ್ಥಿ, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ |
|---|---|
| ೧೯೫೨ | ಎಸ್.ಎಂ. ಮರಿಯಪ್ಪ (ಪಕ್ಷೇತರ) ೧೨,೪೪೭ (೫೧.೦೯) |
| **ಉಪ ಚುನಾವಣೆ*** (೧೯೫೪) | ಮರಿಯಪ್ಪನವರ ಆಯ್ಕೆ ಅನೂರ್ಜಿತಗೊಂಡುದರ ಪ್ರಯುಕ್ತ ಎಚ್.ಎಂ. ಚನ್ನಬಸಪ್ಪ * (ಕಾಂಗ್ರೆಸ್) ಮರು ಆಯ್ಕೆ – ೧೮.೪.೧೯೫೬ ರಂದು ರಾಜಿನಾಮೆ |
| **ಉಪ ಚುನಾವಣೆ*** (೧೯೫೬) | ಎಚ್.ಎಂ. ಚನ್ನಬಸಪ್ಪ * (ಕಾಂಗ್ರೆಸ್) – ೨೫.೫.೧೯೫೬ರಲ್ಲಿ ಮರು ಆಯ್ಕೆ |
| ೧೯೫೭ | ಎನ್.ಆರ್. ಸೋಮಣ್ಣ (ಭಾ.ರಾ.ಕಾಂ.) ೧೯,೭೧೪ (೬೮.೦೭) |
| **ಉಪ ಚುನಾವಣೆ*** (೧೯೫೮) | ಎನ್.ಆರ್. ಸೋಮಣ್ಣ ನಿಧನರಾದ ಕಾರಣ ಕೆ.ಎಂ. ದೇವಯ್ಯ (ಭಾ.ರಾ.ಕಾಂ.) ೯,೮೫೦ (೪೧.೦೩) |
| ೧೯೬೨ | ಕೆ.ಎಂ. ದೇವಯ್ಯ (ಭಾ.ರಾ.ಕಾಂ.) ೧೬,೩೫೫ (೫೩.೯೯) |
| ೧೯೬೭ | ಎಚ್.ಎಂ. ಚನ್ನಬಸಪ್ಪ (ಪಕ್ಷೇತರ) ೩೧,೨೮೭ (೭೭.೪೮) |
| ೧೯೭೨ | ಎಚ್.ಎಂ. ಚನ್ನಬಸಪ್ಪ (ಭಾ.ರಾ.ಕಾಂ.) ೨೬,೦೨೭ (೫೫.೮೧) |
| ೧೯೭೮ | ಕೆ.ಎಸ್. ಕಾಳಮರೀಗೌಡ (ಜ.ಪ.) ೨೮,೧೫೭ (೪೨.೩೦) |
| ೧೯೮೩ | ಕೆ.ಎಸ್. ಕಾಳಮರೀಗೌಡ (ಭಾ.ರಾ.ಕಾಂ.) ೨೩,೩೨೮ (೩೩.೯೦) |
| ೧೯೮೫ | ಕೆ. ವೆಂಕಟೇಶ್ (ಜ.ಪ.) ೩೧,೭೬೪ (೩೯.೮೪) |
| ೧೯೮೯ | ಕೆ.ಎಸ್. ಕಾಳಮರೀಗೌಡ (ಭಾ.ರಾ.ಕಾಂ.) ೪೬,೪೬೦ (೪೭.೫೦) |
| ೧೯೯೪ | ಕೆ. ವೆಂಕಟೇಶ್ (ಜ. ದ) ೫೩,೧೧೧ (೪೫.೯೨) |
| ೧೯೯೯ | ಕೆ.ಎಸ್. ಕಾಳಮರೀಗೌಡ (ಭಾ.ರಾ.ಕಾಂ.) ೪೦,೩೨೦ (೩೨) |
| ೨೦೦೪ | ಕೆ. ವೆಂಕಟೇಶ್ (ಜ.ದ.(ಜಾ)) ೩೯,೩೩೫೭ (೨೮.೮೯) |
| ೨೦೦೮ | ಕೆ. ವೆಂಕಟೇಶ್ (ಭಾ.ರಾ.ಕಾಂ.), ೩೮,೪೫೩ |